ನಂದಿಬೆಟ್ಟದ ಬಳಿ ಹೊಸ ಜೇಡ ಪ್ರಭೇದ ಪತ್ತೆ

ಹೊಸ ಜೇಡ ಪ್ರಭೇದಕ್ಕೆ 'ಅರ್ಕಾವತಿ' ಹೆಸರು

• ನಟರಾಜ ನಾಗಸಂದ್ರ

ದೊಡ್ಡಬಳ್ಳಾಪುರ: ತಾಲ್ಲೂಕಿಗೆ ಸಮೀಪದ ನಂದಿಬೆಟ್ಟದ ತಪ್ಪಲಿನ ಹೆಗ್ಗಡಿಹಳ್ಳಿಯಲ್ಲಿ ಹೊಸ ಜೇಡ ಪ್ರಭೇದವನ್ನು ಪರಿಸರಾಸಕ್ತರು ಪತ್ತೆ ಹಚ್ಚಿದ್ದಾರೆ. ನಂದಿ ಬೆಟ್ಟದಲ್ಲಿ ಹುಟ್ಟುವ ಅರ್ಕಾವತಿ ನದಿಯ ಹೆಸರನ್ನು ಈ ಹೊಸ ಜೇಡ ಪ್ರಭೇದಕ್ಕೆ ಇಡಲಾಗಿದೆ.

ಸಾಲ್ಟಿಸಿಡೆ(salticidae) ಕುಟುಂಬಕ್ಕೆ ಸೇರಿರುವ ಈ ಜೇಡವು ಎಗರುವ ಜೇಡಗಳ ಕುಟುಂಬಕ್ಕೆ ಸೇರಿದೆ. ಅರ್ಧ ಸೆಂಟಿಮೀಟರ್‌ಗೂ ಸ್ವಲ್ಪ ಕಡಿಮೆ ಅಳತೆಯ ಈ ಜೇಡ ಹೆಚ್ಚಿನ ಚುರುಕಾಗಿದ್ದು ಎಗರಿ ಕ್ಷಣಾರ್ಧದಲ್ಲಿ ಕಣ್ಮರೆಯಾಗುತ್ತದೆ. ಹೊಸ ಪ್ರಭೇದದ ಜೇಡದ ಕುರಿತಂತೆ ರಷ್ಯಾ ಮೂಲದ ಅಂತರರಾಷ್ಟ್ರೀಯ ಜರ್ನಲ್ 'ಅರ್ಥೋಪೋಡಾ ಸೆಲೆಕ್ಟಾ'ದಲ್ಲಿ ವೈಜ್ಞಾನಿಕ ಬರಹ ಪ್ರಕಟವಾಗಿದೆ.

ಈ ಜೇಡದ ಜಾತಿ ಕೂಡ ಅಪರೂಪದ್ದಾಗಿದೆ. ಭಾರತ, ಚೀನಾ, ಶ್ರೀಲಂಕಾ ಮತ್ತು ವಿಯೆಟ್ನಾಂ ಸೇರಿದಂತೆ ಜಗತ್ತಿನ 4 ದೇಶಗಳಲ್ಲಿ ಮಾತ್ರ ಕಾಣಬಹುದಾಗಿದೆ. ಈಗ ಸಿಕ್ಕಿರುವ ಈ ಜಾತಿಯ ಹೊಸ ಪ್ರಭೇದವು ಇನ್ನೂ ಅಪರೂಪವೆಂದು ನಮ್ಮ ಅಧ್ಯಯನದ ಮೂಲಕ ತಿಳಿಯಲಾಗಿದೆ ಎಂದು ಜೇಡ ಪತ್ತೆ ಹಚ್ಚಿದ ತಂಡದಲ್ಲಿದ್ದ ವೈ.ಟಿ. ಲೋಹಿತ್ ಮಾಹಿತಿ ನೀಡಿದ್ದಾರೆ.



ದೊಡ್ಡಬಳ್ಳಾಪುರ ತಾಲ್ಲೂಕಿಗೆ ಸಮೀಪದ ನಂದಿಬೆಟ್ಟದ ತಪ್ಪಲಿನ ಹೆಗ್ಗಡಿಹಳ್ಳಿ ಸಮೀಪ ಎಲೆಗಳ ಹಾಗೂ ಮರದ ಕೊಂಬೆಗಳ ಮೇಲೆ ಪತ್ತೆಯಾಗಿರುವ 'ಅರ್ಕಾವತಿ' ಜೇಡ

ಜೇಡ ಪತ್ತೆ ಹಚ್ಚುವಲ್ಲಿ ಹಾಗೂ ಅದರ ಜೀವನಕ್ರಮ ಕುರಿತು ಚೆನ್ನೈನ ಎಂಟಮಾಲಜಿ ಇನ್‌ಸ್ಟಿಟ್ಯೂಟ್‌ನ ಡಾ.ಜಾನ್ ಕೆಲಬ್ ಹಾಗೂ ಮರಿಯಾ ಪ್ಯಾಕಿಯಂ, ತಂಡದ ಸದಸ್ಯ ಡಾ.ಅಭಿಜಿತ್ ಎಪಿಸಿ ಒಂದು ವರ್ಷ ಅಧ್ಯಯನ, ಸಂಶೋಧನೆ ನಡೆಸಿದ್ದಾರೆ.

ಚಿನ್ಮಯ್ ಸಿ.ಮಳಿಯೆ, ಎಸ್. ಆಶಾ, ಆರ್.ಜನಾರ್ದನ, ಜೆ. ಚೇತನ್, ಎಸ್.ಪಿ. ಹರಿಚರನ್, ನವೀನ್ ಐಯ್ಯರ್, ಕೆ. ಸಾಕ್ಷಿ ಮತ್ತು ಅಕ್ಷಯ್ ದೇಶಪಾಂಡೆ ತಂಡ ಐದು ತಿಂಗಳ ವಾರಾಂತ್ಯಗಳಲ್ಲಿ ಜೇಡ ಹುಡುಕಾಟ ಮತ್ತು ಜೇಡದ ಮಾದರಿ ಸಂಗ್ರಹಣೆಯಲ್ಲಿ ತೊಡಗಿಸಿಕೊಂಡಿತ್ತು.

ಈ ಬಗ್ಗೆ ತಂಡ ಇನ್ನು ಹೆಚ್ಚಿನ ಸಂಶೋಧನೆ ನಡೆಸುತ್ತಿದೆ ಎಂದು ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿ 500 ಜೇಡ ಪ್ರಭೇದ

ಇದು ಜಗತ್ತಿನಲ್ಲಿ ಗುರುತಿಸಲಾಗಿರುವ ಸುಮಾರು 50,000 ಜೇಡ ಪ್ರಭೇದಗಳ ಪಟ್ಟಿಗೆ ಹೊಸ ಸೇರ್ಪಡೆಯಾಗಿದೆ. ಭಾರತದಲ್ಲಿ ಸುಮಾರು 2,000 ಜೇಡ ಪ್ರಭೇದಗಳಿವೆ ಎಂದು ಗುರುತಿಸಲಾಗಿದೆ. ಕರ್ನಾಟಕದಲ್ಲಿ ಸುಮಾರು 500 ಜೇಡದ ಪ್ರಭೇದಗಳಿವೆ.

'ಅರ್ಕಾವತಿ' ಜೇಡದ ವಿಶೇಷತೆ

ಈ ಜೇಡವನ್ನು ಸಾಮಾನ್ಯವಾಗಿ ಬೆಟ್ಟದ ತಪ್ಪಲಿನ ಎಲ್ಲಾ ಪ್ರದೇಶದಲ್ಲೂ ನೋಡಲು ಸಾಧ್ಯವಾಗಿಲ್ಲ. ಸಂಖ್ಯೆಯೂ ವಿರಳವಾಗಿರುವುದು ಕಂಡುಬಂದಿದೆ. ತರಗೆಲೆ ಉದುರಿದ ಬಂಡೆಯಿರುವ ನೆಲ ಮತ್ತು ಸುತ್ತ ಸ್ವಲ್ಪ ಕುರುಚಲು ಮತ್ತು ಒಣ ಹುಲ್ಲು ಇರುವ ಪ್ರದೇಶದಲ್ಲಿ ಜೇಡ ಕಂಡುಬಂದಿದೆ. ಆದರೆ, ಗಿಡ, ಮರಗಳ ಮೇಲೆ ಕಾಣಿಸಿಲ್ಲ. ಕಾಡು ಮಲ್ಲಿಗೆ ಮತ್ತು ನೀಲಗಿರಿಯ ಸುರಳಿ ಸುತ್ತಿದ ಎಲೆಗಳಲ್ಲಿ ಸಣ್ಣ ಗೂಡು ನಿರ್ಮಿಸಿ ರಾತ್ರಿ ವಿಶ್ರಮಿಸುತ್ತದೆ.

ಇದು ಹಗಲು ಚಟುವಟಿಕೆಯಿಂದ ಕೂಡಿರುತ್ತದೆ. ಸುರಳಿ ಸುತ್ತಿರುವ ಒಣ ಎಲೆಗಳಲ್ಲಿ ಹೆಣ್ಣು ಜೇಡ ಬಲೆಯ ಗೂಡು ನಿರ್ಮಿಸಿ ಮೊಟ್ಟೆಯಿಟ್ಟು ಮರಿಗಳು ಆಗುವವರೆಗೂ ಕಾಯುತ್ತದೆ.

Prajavani
Pg.04

ಜೀವವೈವಿಧ್ಯ ಸಂರಕ್ಷಣೆಗೆ ಸುಸ್ಥಿರ ಕ್ರಿಯಾಯೋಜನೆ



ವಿಶ್ವದ ಜೀವವೈವಿಧ್ಯ ಸಂರಕ್ಷಣೆಗಾಗಿ ರೂಪಿಸಿರುವ ಜಾಗತಿಕ ಕ್ರಿಯಾ ಯೋಜನೆಗೆ 196 ದೇಶಗಳು ಈಚೆಗೆ ಸಹಿ ಮಾಡಿವೆ. ನಾಲ್ಕು ವರ್ಷಗಳಿಂದ ಜರ್ಜೆಯಲ್ಲಿದ್ದ ಈ ಕ್ರಿಯಾಯೋಜನೆಗೆ ಈಗ ಅಂತಿಮ ರೂಪ ದೊರೆತಿದೆ. ಮಾನವನ ಚಟುವಟಿಕೆಗಳು ಪರಿಸರದ ಮೇಲೆ ಬೀರುತ್ತಿರುವ ಪ್ರತಿಕೂಲ ಪರಿಣಾಮಗಳನ್ನು ಕಡಿಮೆ ಮಾಡುವ ಮತ್ತು ಜೀವವೈವಿಧ್ಯಕ್ಕೆ ಪೂರಕವಾಗುವಂತೆ ಆರ್ಥಿಕ ಚಟುವಟಿಕೆಗಳನ್ನು ಮಾರ್ಪಡಿಸುವ ಸುಸ್ಥಿರ ಅಭಿವೃದ್ಧಿ ಮಾದರಿಯನ್ನು 2050ರ ವೇಳೆಗೆ ಸಾಧಿಸಬೇಕು ಎಂಬುದು ಈ ಕ್ರಿಯಾಯೋಜನೆಯ ಗುರಿ. ಜಾಗತಿಕ ಮಟ್ಟದ ಎಲ್ಲಾ ಪರಿಸರ ಸಂಬಂಧಿ ಕ್ರಿಯಾಯೋಜನೆಗಳ ಅನುಷ್ಠಾನದ ಪ್ರಯೋಗಶಾಲೆಗಳು ಅಭಿವೃದ್ಧಿಶೀಲ ರಾಷ್ಟ್ರಗಳೇ ಆಗಿವೆ. ಜಾಗತಿಕ ಜೀವವೈವಿಧ್ಯ ಕ್ರಿಯಾಯೋಜನೆಯಲ್ಲೂ ಅಭಿವೃದ್ಧಿಶೀಲ ದೇಶಗಳೇ ಈ ಪ್ರಯೋಗಕ್ಕೆ ಇಳಿಯಬೇಕಿದೆ

ಅಪಾಯಗಳ ನಿವಾರಣೆ

2050 ವೇಳೆಗೆ ಸುಸ್ಥಿರ ಅಭಿವೃದ್ಧಿ ಮಾದರಿಯನ್ನು ರೂಪಿಸುವಲ್ಲಿ ಕೆಲವಾರು ಕಡಿಮೆ ಅವಧಿಯ ಗುರಿಗಳನ್ನು ಹಾಕಿಕೊಳ್ಳಲಾಗಿದೆ. 2030ರ ವೇಳೆಗೆ ಈ ಗುರಿಗಳನ್ನು ಮುಟ್ಟಬೇಕಿದೆ. ಅವುಗಳಲ್ಲಿ, ಜೀವವೈವಿಧ್ಯವು ಈಗ ಎದುರಿಸುತ್ತಿರುವ ಅಪಾಯಗಳನ್ನು ನಿವಾರಣೆ ಮಾಡುವುದು ಮೊದಲ ಗುರಿ.

- ವಿಶ್ವದ ಎಲ್ಲೆಡೆ ನೆಲ ಮತ್ತು ಜಲದಲ್ಲಿ ಜೀವವೈವಿಧ್ಯದ ದೃಷ್ಟಿಯಿಂದ ಮಹತ್ವದ ಸ್ಥಳಗಳನ್ನು ರಕ್ಷಿಸಬೇಕು. ಅಂತಹ ಸ್ಥಳಗಳಿಗೆ ಅಥವಾ ನೆಲಗಳಿಗೆ ಇನ್ನೂ ಹೆಚ್ಚಿನ ಹಾನಿಯಾಗದಂತೆ ಎಚ್ಚರವಹಿಸಬೇಕು
- ನೆಲ ಮತ್ತು ಜಲ ಪ್ರದೇಶಗಳಲ್ಲಿ ಈಗಾಗಲೇ ನಾಶವಾಗಿರುವ ಜೀವವೈವಿಧ್ಯ ನೆಲೆಗಳಲ್ಲಿ, ಕೇ 20ರಷ್ಟಾದರೂ ನೆಲೆಗಳನ್ನು ಮರುರೂಪಿಸುವ ಕೆಲಸವಾಗಬೇಕು. ಅಲ್ಲಿದ್ದ ಸಹಜ ಪರಿಸರ ವ್ಯವಸ್ಥೆಯನ್ನು ಮರುಸ್ಥಾಪಿಸಬೇಕು
- ಜೀವವೈವಿಧ್ಯದ ದೃಷ್ಟಿಯಿಂದ ಹೀರಾ ಮಹತ್ವ ಪಡೆದಿರುವ ಹಲವು ಪ್ರದೇಶಗಳು ಈಗಾಗಲೇ ನಾಶವಾಗಿವೆ. ಅತ್ಯಂತ ಮಹತ್ವದ ಈ ಪ್ರದೇಶಗಳಲ್ಲಿ ಕೇ 30ರಷ್ಟಾದರೂ ಮರುಸ್ಥಾಪಿಸಬೇಕು
- ಒಂದು ಪ್ರದೇಶಕ್ಕೆ ಸೀಮಿತವಾದ ಸಸ್ಯ ಮತ್ತು ಪ್ರಾಣಿ ಪ್ರಭೇದಗಳ ಸಂರಕ್ಷಣೆ ಮತ್ತು ನಿರ್ವಹಣೆಗೆ ಆದ್ಯತೆ ನೀಡಬೇಕು. ಈಗಾಗಲೇ ವಿನಾಶದ ಅಂಚಿಗೆ ತಲುಪಿರುವ ಇಂತಹ ಪ್ರಭೇದಗಳನ್ನು ರಕ್ಷಿಸಲು ಕ್ರಮ ತೆಗೆದುಕೊಳ್ಳಬೇಕು. ಮಾನವ-ವನ್ಯಜೀವಿ ಸಂಘರ್ಷವನ್ನು ತಡೆಗಟ್ಟಲು ಅಥವಾ ಕಡಿಮೆ ಮಾಡಲು ಆಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು
- ಆರೋಗ್ಯ ಉತ್ಪನ್ನಗಳನ್ನು ಸುಸ್ಥಿರ ವಿಧಾನದ ಮೂಲಕ ಸಂಗ್ರಹಿಸಬೇಕು. ಅಂತಹ ಉತ್ಪನ್ನಗಳ ಸಂಗ್ರಹ, ಮಾರಾಟ ಮತ್ತು ಬಳಕೆಯನ್ನು ಹಾನಿಯಾಗದಂತೆ ನಿರ್ವಹಿಸಬೇಕು. ಈ ಮೂಲಕ ಅರಣ್ಯಗಳ ಬಳಕೆಯು ಮೇಲೆ ಸಿಗಾ ಇರಬೇಕು
- ಬೇರೊಂದು ಪರಿಸರದ ಪ್ರದೇಶಗಳನ್ನು ಹೊಸ ಪ್ರದೇಶಗಳಿಗೆ ಪರಿಚಯಿಸುವ ಯತ್ನಗಳು ಕಡಿಮೆಯಾಗಬೇಕು. ನಿಯಂತ್ರಿತ ವಿಧಾನದಲ್ಲಿ ಇಂತಹ ಕ್ರಿಯೆಗಳನ್ನು ನಡೆಸಬೇಕು. ಸ್ಥಳೀಯ ಪ್ರಭೇದಗಳಿಗೆ ಪ್ರತಿಕೂಲವಾಗಿ ಪರಿಣಮಿಸುವ ಅಥವಾ ಪರಿಣಮಿಸುತ್ತಿರುವ ಬೇರೊಂದು ಪರಿಸರದ ಪ್ರಭೇದಗಳನ್ನು, ಅಲ್ಲಿಂದ ನಿವಾರಣೆ ಮಾಡಬೇಕು
- ಜೀವವೈವಿಧ್ಯ ಮತ್ತು ಪರಿಸರ ವ್ಯವಸ್ಥೆಗೆ ಧಕ್ಕೆಯಾಗದೇ ಇರುವಷ್ಟರಮಟ್ಟಿಗೆ ಎಲ್ಲಾ ಸ್ತರಗಳ ಮಾಲಿನ್ಯಗಳನ್ನು ತಗ್ಗಿಸಬೇಕು. ಭೂಮಿಯ ಫಲವತ್ತತೆ ಕಳೆದುಕೊಳ್ಳುವಂತಹ ಕ್ರಿಯೆಗಳನ್ನು 2030ರ ವೇಳೆಗೆ ಕೇ 50ರಷ್ಟು ಕಡಿಮೆ ಮಾಡಬೇಕು. ಕೃಷಿಯಲ್ಲಿ ಕೀಟನಾಶಕಗಳ ಬಳಕೆಯನ್ನು ಮೂರನೇ ಎರಡರಷ್ಟು ಕಡಿಮೆ ಮಾಡಬೇಕು. 2030ರ ವೇಳೆಗೆ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಪೂರ್ಣವಾಗಿ ನಿವಾರಿಸಬೇಕು
- ಹವಾಮಾನ ವೈಪರೀತ್ಯವು ಜೀವವೈವಿಧ್ಯವನ್ನು ಬಾಧಿಸದಂತೆ ತಡೆಯಬೇಕು ಅಥವಾ ಅದರ ಪರಿಣಾಮವನ್ನು ಕಡಿಮೆ ಮಾಡಬೇಕು. ಈಗಾಗಲೇ ಜೀವವೈವಿಧ್ಯದ ಮೇಲೆ ಆಗಿರುವ ದುಷ್ಪರಿಣಾಮಗಳನ್ನು ಅಧ್ಯಯನ ಮಾಡಬೇಕು. ಮತ್ತೆ ಅಂತಹ ಪರಿಸರ ವ್ಯವಸ್ಥೆ ಮರುಸ್ಥಾಪನೆಗೆ ಯತ್ನಿಸಬೇಕು

'ಹಂಚಿಕೊಳ್ಳುವುದರಲ್ಲಿದೆ ಸುಸ್ಥಿರ ಅಭಿವೃದ್ಧಿ'

ಜೀವವೈವಿಧ್ಯ ಸಂರಕ್ಷಣೆಯನ್ನು ಸುಸ್ಥಿರ ಅಭಿವೃದ್ಧಿಯ ಮಾದರಿಯಣ್ಣಾಗಿಸುವುದೂ ಈ ಕ್ರಿಯಾಯೋಜನೆಯ ಮಹತ್ವದ ಘಟ್ಟಗಳಲ್ಲಿ ಒಂದು. ಜೀವವೈವಿಧ್ಯ ಸಂರಕ್ಷಣೆ ಹೇಗಿರಬೇಕು ಎಂಬುದಕ್ಕೆ ಆತ್ಯಗತ್ಯವಾದ ಅಭಿವೃದ್ಧಿ ಚಟುವಟಿಕೆಗಳು ಕುಂಠಿತವಾಗದಂತೆ ನೋಡಿಕೊಳ್ಳುವುದು ಮತ್ತು ಮಾನವರ ಆಗತ್ಯ ಪೂರೈಕೆಗೆ ಕೊಡಕಾಗದಂತೆ ಎಚ್ಚರವಹಿಸುವುದೂ ಆತ್ಯಗತ್ಯವಾಗಿದೆ. 'ಇದಕ್ಕಾಗಿಯೂ ಕೆಲವಾರು ಕ್ರಿಯಾವಿಧಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಇವುಗಳನ್ನು ವಿಶ್ವ ಸಂಸ್ಥೆಯ ಸದಸ್ಯ ರಾಷ್ಟ್ರಗಳು ಪಾಲಿಸಬೇಕಿದೆ.

ಜೀವವೈವಿಧ್ಯ ಸಂರಕ್ಷಣೆಯಲ್ಲಿ ನೆಲ, ಜಲ ಸಂರಕ್ಷಣೆಗೆ ಕ್ರಮ ತೆಗೆದುಕೊಳ್ಳುವುದೇನೋ ಸರಿ. ಆದರೆ, ಅದರಿಂದ ಜನರ ಆಹಾರ ಭದ್ರತೆಗೆ, ಪೌಷ್ಟಿಕಾಂಶ ಪೂರೈಕೆಗೆ ಯಾವುದೇ ತೊಡಕಾಗಬಾರದು. ಆಹಾರ ಭದ್ರತೆ ಮತ್ತು ಪೌಷ್ಟಿಕಾಂಶ ಪೂರೈಕೆಗೆ ಧಕ್ಕೆಯಾದರೆ ಜನರ ಆರೋಗ್ಯವು ಹದಗೆಡುವ ಅಪಾಯವಿರುತ್ತದೆ. ಜತೆಗೆ ಜನರ ಜೀವನೋಪಾಯಕ್ಕೂ ಧಕ್ಕೆಯಾಗುತ್ತದೆ. ಈ ಕಾರಣದಿಂದಾಗಿ ಸುಸ್ಥಿರ ಅಭಿವೃದ್ಧಿಯ ಮಾದರಿಯನ್ನು ರೂಪಿಸುವುದು ಅತ್ಯವಶ್ಯಕ. ಹೀಗಾಗಿ ಬುಡಕಟ್ಟು ಸಮುದಾಯಗಳು ಪರಿಸರದ ಜತೆಗೆ ಇಟ್ಟುಕೊಂಡಿರುವಂತಹ ರಕ್ಷಣಾತ್ಮಕ ಪದ್ಧತಿಗಳ ಅಧ್ಯಯನ ನಡೆಸಬೇಕು ಮತ್ತು ಅವುಗಳನ್ನು ಅಳವಡಿಸಿಕೊಳ್ಳಬೇಕು. ಈ ಮೂಲಕ ಪರಿಸರ ಸಂರಕ್ಷಣೆ ಮತ್ತು ಜನರ ಜೀವನೋಪಾಯ ಎರಡಕ್ಕೂ ಸಮರ್ಥವಾಗಿ ನಿರ್ವಹಿಸುವಂತೆ ಎಂಬುದು ಈ ಕ್ರಿಯಾ ಯೋಜನೆಯ ಉದ್ದೇಶ.

ಪ್ರತಿ ಪ್ರದೇಶದಲ್ಲೂ ಲಭ್ಯವಿದ್ದ ಪರಿಸರ ವ್ಯವಸ್ಥೆಗೆ ಹೊಂದಿಕೊಳ್ಳುವಂಥ ಕೃಷಿ ಪದ್ಧತಿ, ವೀರ್ಯಾಣುಗಳ ಮತ್ತು ಅಂಡಕೋಶಗಳ ಕ್ರೋಢೀಕರಣ ಪದ್ಧತಿಗಳು, ಜಲ್ಲಿಕಲ್ಲುಗಳ ಪದ್ಧತಿಗಳು, ಎಲ್ಲಾ ಪರಿಸರಗಳಿಗೆ ಹೊಂದಿಕೆಯಾಗುವುದಿಲ್ಲ. ಕೆಲವು ಪರಿಸರ ವ್ಯವಸ್ಥೆಗೆ ಪೂರಕವಾಗುವ ಅಭಿವೃದ್ಧಿ ಪದ್ಧತಿಗಳು, ಬೇರೊಂದು ಪರಿಸರ ವ್ಯವಸ್ಥೆಗೆ ಮಾರಕವಾಗಬಹುದು. ಈ ಅಪಾಯವನ್ನು ತಪ್ಪಿಸಲು ಸಲುವಾಗಿ ಪ್ರತಿ ಜೀವವೈವಿಧ್ಯ ತಾಣಕ್ಕೂ ಪ್ರತ್ಯೇಕವಾದ ಅಭಿವೃದ್ಧಿ ಪದ್ಧತಿಗಳನ್ನು ರೂಪಿಸುವುದಕ್ಕೆ ಆದ್ಯತೆ ನೀಡಬೇಕು.

ಸುಸ್ಥಿರ ಅಭಿವೃದ್ಧಿಯ ಮಾದರಿ ಮತ್ತು ಪದ್ಧತಿಗಳ ಜ್ಞಾನವನ್ನು ವಿಶ್ವದ ಎಲ್ಲಾ ದೇಶಗಳ ಜತೆಗೆ ಹಂಚಿಕೊಳ್ಳಬೇಕು. ಇದರಿಂದ ಜೀವವೈವಿಧ್ಯದ ರಕ್ಷಣೆ, ಮಾನವನ ಜೀವನೋಪಾಯ ಮತ್ತು ಆರೋಗ್ಯದಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಈ ಸ್ತರಗಳ ಪರಸ್ಪರ ನೆರವಾಗುವಂತಹ ಮನಸ್ಥಿತಿಯು ಸುಸ್ಥಿರ ಅಭಿವೃದ್ಧಿ ಸಾಧಿಸಲು ನೆರವಾಗುತ್ತದೆ ಎಂದು ಜೀವವೈವಿಧ್ಯ ಸಂರಕ್ಷಣೆ ಕ್ರಿಯಾಯೋಜನೆಯಲ್ಲಿ ವಿವರಿಸಲಾಗಿದೆ.

ಜೀವವೈವಿಧ್ಯ ಸಂರಕ್ಷಣೆಗೆ ಮುಂದಾಗಬೇಕಿರುವುದು ಅಭಿವೃದ್ಧಿಶೀಲ ದೇಶಗಳೇ ಆಗಿವೆ. ಕ್ರಿಯಾಯೋಜನೆಯಲ್ಲಿ ವಿವರಿಸಿರುವಂತಹ ಗುರಿಗಳನ್ನು ಸಾಧಿಸಲು ಈ ದೇಶಗಳು ತಮ್ಮ ಅಭಿವೃದ್ಧಿಯನ್ನು ಸ್ವಲ್ಪಮಟ್ಟಿಗೆ ಬಲಿಕೊಡಬೇಕಾದ ಅನಿವಾರ್ಯತೆ ಇದೆ. ಅಭಿವೃದ್ಧಿಶೀಲ ದೇಶಗಳು ಮಾಡುವ ಇಂತಹ ತ್ಯಾಗಕ್ಕೆ, ಅಭಿವೃದ್ಧಿ ಹೊಂದಿದ ದೇಶಗಳು ಪರಿಹಾರ ಒದಗಿಸಬೇಕಾಗುತ್ತದೆ. ಹವಾಮಾನ ವೈಪರೀತ್ಯ ನಿಯಂತ್ರಣ ಕ್ರಮಗಳಲ್ಲೂ ಅಭಿವೃದ್ಧಿ ಹೊಂದಿದ ದೇಶಗಳು, ಅಭಿವೃದ್ಧಿಶೀಲ ದೇಶಗಳಿಗೆ ಈ ಸ್ತರದಲ್ಲಿ ಹಣಕಾಸು ನೆರವನ್ನು ನೀಡುತ್ತಿವೆ. ಜೀವವೈವಿಧ್ಯ ಸಂರಕ್ಷಣೆ ಕ್ರಿಯಾಯೋಜನೆಯಲ್ಲೂ ಅಭಿವೃದ್ಧಿಶೀಲ ದೇಶಗಳಿಗೆ ಇಂತಹ ನೆರವು ದೊರೆಯಲಿದೆ. ಭಾರತಕ್ಕೂ ಇಂತಹ ಆರ್ಥಿಕ ನೆರವಿನ ದೊರೆಯಲಿದೆ ಎಂದು ಸಿರೀಕ್ಷಿಸಲಾಗಿದೆ.

ಅನುಷ್ಠಾನದ ತಂತ್ರಗಳು

- ಜೀವವೈವಿಧ್ಯ ಸಂರಕ್ಷಣೆ ನಿಸರ್ಯಲ್ಲಿ ತೆಗೆದುಕೊಳ್ಳುವ ವೈವಿಧ್ಯಮಯ ಕ್ರಮಗಳು ಸಮಗ್ರವಾಗಿರಬೇಕು. ಸೀತಿಗಳು, ನಿಯಮಾವಳಿಗಳು, ಯೋಜನೆ, ಅಭಿವೃದ್ಧಿ ಪ್ರಕ್ರಿಯೆ, ಬಡತನ ನಿರ್ಮೂಲನೆ ಕಾರ್ಯತಂತ್ರಗಳು, ಸರ್ಕಾರದ ಎಲ್ಲ ಹಂತಗಳಲ್ಲಿ ತೆಗೆದುಕೊಳ್ಳುವ ಪರಿಸರ ಪರಿಣಾಮ ಮೌಲ್ಯಮಾಪನ ಚಟುವಟಿಕೆಗಳು ಹಾಗೂ ಆರ್ಥಿಕ ಕಾರ್ಯಕ್ರಮಗಳು ಜೀವವೈವಿಧ್ಯ ರಕ್ಷಣೆ ಉದ್ದೇಶಕ್ಕೆ ಹೊಂದಾಣಿಕೆಯಾಗುವಂತಿರಬೇಕು
- ಸರ್ಕಾರ ಹಾಗೂ ಖಾಸಗಿ ವಲಯದ ಸಣ್ಣ, ಮಧ್ಯಮ, ಬೃಹತ್ ಉದ್ದಿಮೆಗಳು ತಮ್ಮ ನಿರ್ಣಯಕ್ರಾಂತಿಯಲ್ಲಿರುವ ಚಟುವಟಿಕೆಗಳ ಮೇಲೆ ನಿಗಾ ವಹಿಸಿ, ಜೀವವೈವಿಧ್ಯದ ಮೇಲೆ ಸ್ಥಳೀಯವಾಗಿ ಅಥವಾ ಜಾಗತಿಕವಾಗಿ ಪರಿಣಾಮ ಉಂಟಾಗುತ್ತಿರುವ ಎಂಬುದನ್ನು ಪರಿಶೀಲಿಸಿ ವರದಿ ಮಾಡಬೇಕು. ಪರಿಸರದ ಮೇಲೆ ಸಕಾರಾತ್ಮಕ ಪರಿಣಾಮ ಉಂಟಾಗುತ್ತಿದ್ದರೆ, ಅದನ್ನು ಅರ್ಥವಷ್ಟು ತೆಗ್ಗಿಸಲು ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಜೀವವೈವಿಧ್ಯ ಸಂರಕ್ಷಣೆಗೆ ಪೂರಕವಾದ ಕ್ರಮಗಳನ್ನೂ ಕೈಗೆತ್ತಿಕೊಳ್ಳಬೇಕು. ಈ ಮೂಲಕ ಉದ್ದಮಗಳಲ್ಲಿ ಜೀವವೈವಿಧ್ಯಕ್ಕೆ ಇರುವ ಅಪಾಯಗಳನ್ನು ತಪ್ಪಿಸಿ, ಉತ್ಪಾದನೆ, ಪೂರೈಕೆ ಸರಪಳಿ, ವಿಲೇವಾರಿಯಲ್ಲಿ ಸುಸ್ಥಿರತೆ ಸಾಧಿಸಬಹುದು
- ಜನರು ತಮ್ಮ ಸಂಸ್ಕೃತಿಯ ಅನುಸಾರ ತೊಡಗಿಕೊಳ್ಳುವ ಚಟುವಟಿಕೆಗಳು ಜವಾಬ್ದಾರಿಯುತ ಆಯ್ಕೆಗಳು ಆಗುವಂತೆ ಪೂರಕವಾದ ಮಾಹಿತಿ ಒದಗಿಸಿಕೊಳ್ಳಬೇಕಿದೆ. ಸೂಕ್ತ ಮಾಹಿತಿಗಳೊಂದಿಗೆ, ಪರ್ಯಾಯ ಚಟುವಟಿಕೆಗಳ ಬಗ್ಗೆ ಅವರನ್ನು ಜಾಗೃತಗೊಳಿಸಬೇಕಿದೆ. ತ್ಯಾಜ್ಯ ಉತ್ಪಾದನೆಯನ್ನು ಅರ್ಥವಷ್ಟು ಕಡಿಮೆಗೊಳಿಸುವುದು, ಆಹಾರ ಹಾಗೂ ಇತರ ಸಾಮಗ್ರಿಗಳ ಆಕಸ್ಮಿಕವಾದ ಬಳಕೆಯ ಬಗ್ಗೆ ತಿಳಿವಳಿಕೆ ಮೂಡಿಸಬೇಕಿದೆ
- ಜೈವಿಕ ತಂತ್ರಜ್ಞಾನದಿಂದಾಗಿ ಜೀವವೈವಿಧ್ಯ, ಮಾನವನ ಆರೋಗ್ಯದ ಮೇಲೆ ಆಗಬಹುದಾದ ವ್ಯತಿರಿಕ್ತ ಪರಿಣಾಮಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಎಲ್ಲ ದೇಶಗಳಲ್ಲಿ ಪೂರಕ ಕ್ರಮಗಳನ್ನು ತೆಗೆದುಕೊಳ್ಳಬೇಕು
- ಜೀವವೈವಿಧ್ಯಕ್ಕೆ ಹಾನಿಮಾಡಬಹುದಾದ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡುವುದನ್ನು ನ್ಯಾಯಯುತ ಮಾರ್ಗದಲ್ಲಿ ಸ್ಥಗಿತಗೊಳಿಸಬೇಕು ಅಥವಾ ನಿಷೇಧಗಳಲ್ಲಿ ಸುಧಾರಣೆ ತರಬೇಕು. ಸಹಾಯಧನಗಳು ನೇರದಂತೆ, ಪ್ರತೀ ವರ್ಷ ₹41 ಲಕ್ಷ ಕೋಟಿಯನ್ನು (500 ಬಿಲಿಯನ್ ಡಾಲರ್) ಮೊತ್ತದ ಪ್ರೋತ್ಸಾಹಧನವನ್ನು ಕಡಿತಗೊಳಿಸಬೇಕು
- ಸಾಮರ್ಥ್ಯ ವೃದ್ಧಿ, ತಂತ್ರಜ್ಞಾನ ಪಾಲ್ಗಾಣಿ, ವೈಜ್ಞಾನಿಕ ಸಹಕಾರದ ಮೂಲಕ ಕ್ರಿಯಾಯೋಜನೆಯ ಗುರಿಗಳನ್ನು ತಲುಪಬಹುದು. ಇದಕ್ಕಾಗಿ ಹಣಕಾಸಿನ ಸಂಪನ್ಮೂಲವನ್ನು ವೃದ್ಧಿಸುವ ಅಗತ್ಯವಿದೆ. ಎಲ್ಲ ಮೂಲಗಳಿಂದ ₹16 ಲಕ್ಷ ಕೋಟಿ (200 ಬಿಲಿಯನ್ ಡಾಲರ್) ಹಣಕಾಸನ್ನು ಪ್ರತೀ ವರ್ಷ ಕ್ರೋಢೀಕರಿಸಬೇಕಿದೆ. ಈ ಪೈಕಿ ಸುಮಾರು ₹82 ಸಾವಿರ ಕೋಟಿಯಷ್ಟು ಹಣವನ್ನು (10 ಬಿಲಿಯನ್ ಡಾಲರ್) ಅಭಿವೃದ್ಧಿಶೀಲ ದೇಶಗಳಿಗೆ ನೆರವಾಗಿ ನೀಡಬೇಕಿದೆ. ರಾಷ್ಟ್ರೀಯ ಜೀವವೈವಿಧ್ಯ ಹಣಕಾಸು ಯೋಜನೆಗಾಗಿ ಖಾಸಗಿ ವಲಯದಿಂದ ಗರಿಷ್ಠ ನೆರವು ಪಡೆದುಕೊಳ್ಳಬೇಕು ಹಾಗೂ ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕು
-



ರಸಗೊಬ್ಬರ, ಕೀಟನಾಶಕ ಬಳಕೆಗೆ ನಿರ್ಬಂಧ

ಕೃಷಿಯಲ್ಲಿ ರಸಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯು ಜೀವವೈವಿಧ್ಯ ಸಂರಕ್ಷಣೆಯಲ್ಲಿ ದೊಡ್ಡ ತೊಡಕಾಗಿದೆ ಎಂಬುದು ಈ ಸಮ್ಮೇಳನದಲ್ಲಿ ಚರ್ಚೆಗೆ ಬಂದಿದ್ದ ಪ್ರಮುಖ ವಿಷಯಗಳಲ್ಲಿ ಒಂದು. ಹೀಗಾಗಿ ಕ್ರಿಯಾಯೋಜನೆಯಲ್ಲೂ ಈ ವಿಷಯವನ್ನು ಪ್ರಸ್ತಾಪಿಸಲಾಗಿತ್ತು.

ಅಭಿವೃದ್ಧಿಶೀಲ ದೇಶಗಳು ಕೃಷಿಯಲ್ಲಿ ಬಳಸುತ್ತಿರುವ ರಸಗೊಬ್ಬರ ಮತ್ತು ಕೀಟನಾಶಕಗಳಿಗೆ ಸಹಾಯಧನ ನೀಡುತ್ತಿವೆ. ಈ ಸಹಾಯಧನವನ್ನು ಕಡಿತಗೊಳಿಸಬೇಕು. ಆ ಮೂಲಕ ಕೃಷಿಯಲ್ಲಿ ರಸಗೊಬ್ಬರ ಮತ್ತು ಕೀಟನಾಶಕ ಬಳಕೆಯನ್ನು ತಗ್ಗಿಸಬೇಕು ಎಂದು ಜೀವವೈವಿಧ್ಯ ಸಂರಕ್ಷಣೆಯ ಕರಡು ಕ್ರಿಯಾಯೋಜನೆಯಲ್ಲಿ ಉಲ್ಲೇಖಿಸಲಾಗಿತ್ತು.

ಇದಕ್ಕೆ ಭಾರತವು ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. 'ರಸಗೊಬ್ಬರ ಮತ್ತು ಕೀಟನಾಶಕ ಬಳಕೆಯನ್ನು ತಗ್ಗಿಸುವುದು ಆಹಾರ ಪದಾರ್ಥಗಳ ಉತ್ಪಾದನೆಯನ್ನು ಬಾಧಿಸುತ್ತದೆ. ಇದರಿಂದ ಜನರ ಆಹಾರ ಭದ್ರತೆಗೆ ಧಕ್ಕೆಯಾಗುತ್ತದೆ. ಅಲ್ಲದೆ, ಜನರ ಜೀವನೋಪಾಯದ ಹಾದಿಯೂ ದುರ್ಗಮವಾಗುತ್ತದೆ. ಇಂತಹ ಷರತ್ತುಗಳು ಕಾರ್ಯಸಾಧುವಲ್ಲ. ಹೀಗಾಗಿ ರಸಗೊಬ್ಬರ ಮತ್ತು ಕೀಟನಾಶಕ ಬಳಕೆಗೆ ನೀಡಿರುವ ಗುರಿಯ ಮಟ್ಟವನ್ನು ತಗ್ಗಿಸಬೇಕು' ಎಂದು ಭಾರತವು ಆಗ್ರಹಿಸಿತ್ತು. ದೀರ್ಘಾವಧಿಯ ಚರ್ಚೆಯ ನಂತರ ಈ ಷರತ್ತನ್ನು ಸಡಿಲಗೊಳಿಸಲಾಗಿದೆ. ಆದರೆ, ರಸಗೊಬ್ಬರ ಮತ್ತು ಕೀಟನಾಶಕ ಬಳಕೆಯನ್ನು ಸ್ವಲ್ಪಮಟ್ಟಾದರೂ ತಗ್ಗಿಸಬೇಕಾದ ಅನಿವಾರ್ಯತೆಗೆ ಅಭಿವೃದ್ಧಿಶೀಲ ದೇಶಗಳನ್ನು ಈ ಕ್ರಿಯಾಯೋಜನೆ ದೂಡುತ್ತದೆ.

Prajavani
Pg.09

ಪರ್ಯಾಯ ಬೆಳೆಯಾಗುವ ಸೂಚನೆ

ಹೊಸ ಅರಿಸಿನ ತಳಿ ಅಭಿವೃದ್ಧಿ

• ಎಚ್.ಎಸ್.ಸಚ್ಚಿತ್

ಹುಣಸೂರು(ಮೈಸೂರು ಜಿಲ್ಲೆ): ವರ್ಜೀನಿಯ ತಂಬಾಕು ಬೆಳೆಗೆ ಹೆಸರುವಾಸಿಯಾದ ಹುಣಸೂರು ಉಪ ವಿಭಾಗದಲ್ಲಿ ಅರಿಸಿನ ಬೆಳೆಯು ತಂಬಾಕಿಗೆ ಪರ್ಯಾಯ ವಾಣಿಜ್ಯ ಬೆಳೆಯಾಗುವ ಸೂಚನೆಗಳು ಕಂಡು ಬಂದಿವೆ.

ರೋಗ ನಿರೋಧಕ ಔಷಧಯುಕ್ತ ಕರ್ಕುಮಿನ್ ಅಂಶ ಶೇ 7ರಷ್ಟಿರುವ ಮೇಘಾಲಯದ ಲಕಾಡಾಂಗ್ ಅರಿಸಿನ ತಳಿಯನ್ನು ಕೇಂದ್ರ ತಂಬಾಕು ಸಂಶೋಧನಾಲಯದಲ್ಲಿ 'ಪ್ರತಿಭಾ ಮತ್ತು ಪ್ರಗತಿ' ಹೆಸರಿನಲ್ಲಿ ಅಭಿವೃದ್ಧಿಪಡಿಸಿದ್ದು ಉತ್ತಮ ಫಲಿತಾಂಶ ಸಿಕ್ಕಿದೆ. ರೈತರಿಗೆ ಬಿತ್ತನೆ ಬೀಜ ವಿತರಿಸುವ ಸಿದ್ಧತೆಯೂ ನಡೆದಿದೆ. ಮೇಘಾಲಯದಲ್ಲಿ ಅತಿ ಹೆಚ್ಚು ಅರಿಸಿನ ಬೆಳೆಯುತ್ತಿದ್ದು, ನಂತರದಲ್ಲಿ ತಮಿಳುನಾಡು, ಕರ್ನಾಟಕವಿದೆ.

ಸದ್ಯ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಕೆಲವೆಡೆ ಬೆಳೆಯಲಾಗುತ್ತಿರುವ ಪಾರಂಪರಿಕ ಸೇಲಂ ತಳಿ ಅರಿಸಿನದಲ್ಲಿ ಕರ್ಕುಮಿನ್ ಅಂಶ ಕಡಿಮೆ ಇದ್ದು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇಲ್ಲ ಎನ್ನಲಾಗಿದೆ.

'ಹೊಸ ತಳಿಗಳಲ್ಲಿ ಕರ್ಕುಮಿನ್ ಅಂಶ ಹೆಚ್ಚಿರುವುದರಿಂದ ಕ್ಯಾನ್ಸರ್ ರೋಗ ನಿವಾರಕ ಔಷಧ ಉತ್ಪಾದಿಸುವ ಕಂಪನಿಗಳಿಂದ ಹೆಚ್ಚಿನ ಬೇಡಿಕೆ ಬರುವ ಸಾಧ್ಯತೆ ಇದೆ' ಎಂದು ಸಂಶೋಧನಾ ಕೇಂದ್ರದ ಮುಖ್ಯಸ್ಥ ವಿಜ್ಞಾನಿ ಡಾ.ರಾಮಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.

'10ರಿಂದ 11 ತಿಂಗಳ ಅವಧಿಯ, ಹೆಚ್ಚು ನೀರು ಬೇಡುವ ಸೇಲಂ ಅರಿಸಿನದ ಇಳುವರಿ ಪ್ರತಿ ಎಕರೆಗೆ 30ರಿಂದ 40 ಕ್ವಿಂಟಲ್ ದೊರಕುತ್ತದೆ. ಹೊಸ ತಳಿಗಳ ಅವಧಿ 6–7 ತಿಂಗಳಷ್ಟೇ. ಹನಿ ನೀರಾವರಿಯಲ್ಲೂ ಬೆಳೆಯಬಹುದು. ಇಳುವರಿ 80ರಿಂದ 90 ಕ್ವಿಂಟಲ್ ಬರಲಿದೆ. ಉತ್ಪಾದನಾ ವೆಚ್ಚ ಎಕರೆಗೆ ₹ 40ಸಾವಿರದಿಂದ ₹ 50 ಸಾವಿರ ಆಗಲಿದೆ' ಎಂದು ತಿಳಿಸಿದರು.

ಕೇಂದ್ರದಲ್ಲಿ ಕೆಂಪು ಮಣಸಿನಕಾಯಿ (ಬ್ಯಾಡಗಿ) ಹೊಸ ತಳಿ ಅಭಿವೃದ್ಧಿಗೊಳಿಸುವ ಪ್ರಯತ್ನವೂ ನಡೆಯಲಿದೆ.

ಕೃಷಿ ವಿಜ್ಞಾನಿಗಳು ಅಭಿವೃದ್ಧಿಪಡಿಸಿರುವ 'ಪ್ರಗತಿ ಮತ್ತು ಪ್ರತಿಭಾ' ಅರಿಸಿನ ತಳಿ ಬಿತ್ತನೆ ಬೀಜವನ್ನು 2023ರ ಮಾರ್ಚ್‌ನಲ್ಲಿ ರೈತರಿಗೆ ವಿತರಿಸಲು ಸಿದ್ಧತೆ ನಡೆದಿದೆ ಡಾ.ರಾಮಕೃಷ್ಣ
ಸಂಶೋಧನಾ ಕೇಂದ್ರದ ಮುಖ್ಯಸ್ಥ, ವಿಜ್ಞಾನಿ



'ಪ್ರತಿಭಾ ಮತ್ತು ಪ್ರಗತಿ' ಅರಿಸಿನ ತಳಿ

Prajavani
Pg.10

ಜನವರಿಯಲ್ಲಿ ಮೊದಲ ಹಂತದ ಆಯ್ಕೆ | 2 ಲಕ್ಷ ವಿದ್ಯಾರ್ಥಿಗಳಿಗೆ ನೆರವು ನಿರೀಕ್ಷೆ

ಕೃಷಿ ಕಾರ್ಮಿಕರ ಮಕ್ಕಳಿಗೂ ವಿದ್ಯಾನಿಧಿ

■ ಶ್ರೀಕಾಂತ್ ಶೇಷಾದ್ರಿ ಬೆಂಗಳೂರು

ವಿದ್ಯಾನಿಧಿ ಯೋಜನೆಯನ್ನು ಭೂರಹಿತ ಕೃಷಿ ಕಾರ್ಮಿಕರ ಮಕ್ಕಳಿಗೂ ವಿಸ್ತರಿಸಲು ಹೊರಟಿರುವ ಸರ್ಕಾರ ಹೈಬ್ರಿಡ್ ಮಾದರಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಮುಂದಾಗಿದೆ. ಬೊಮ್ಮಾಯಿ ಸರ್ಕಾರದ ಫ್ಲ್ಯಾಗ್‌ಶಿಪ್ ಕಾರ್ಯಕ್ರಮ ಎನಿಸಿಕೊಂಡ ರೈತ ವಿದ್ಯಾನಿಧಿಯನ್ನು ವಿವಿಧ ವಲಯದವರ ಮಕ್ಕಳಿಗೆ ವಿಸ್ತರಿಸುವಂತೆ ಒತ್ತಡವಿದೆ. ಈ ನಡುವೆ ಸಿಎಂ ಭೂರಹಿತ ಕೃಷಿ ಕಾರ್ಮಿಕರಿಗೆ ವಿಸ್ತರಿಸಲು ನಿರ್ಧರಿಸಿದ್ದು, ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಕಾರ್ಯ ಪ್ರಗತಿಯಲ್ಲಿದೆ.

ಮೊದಲ ಹಂತದಲ್ಲಿ ಅಂದಾಜು 2 ಲಕ್ಷ ವಿದ್ಯಾರ್ಥಿಗಳಿಗೆ ಏಕಕಾಲದಲ್ಲಿ ವಿದ್ಯಾರ್ಥಿ ವೇತನವನ್ನು ನೇರವಾಗಿ ಅವರ ಖಾತೆಗೆ ಜಮಾ ಮಾಡಲು ಕೃಷಿ ಇಲಾಖೆ ಪ್ರಕ್ರಿಯೆ ಆರಂಭಿಸುತ್ತಿದೆ. ಅರ್ಜಿ ಸ್ವೀಕರಿಸದೆ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳ ಖಾತೆಗೆ ನೇರ ಜಮಾ ಮಾಡುವ ರೈತ ವಿದ್ಯಾನಿಧಿಯ ಪರಿಣಾಮಗಳನ್ನು ಅಧ್ಯಯನ ಮಾಡಿದ್ದ ಸರ್ಕಾರ, ಭೂರಹಿತ ಕೃಷಿ ಕಾರ್ಮಿಕರ ಮಕ್ಕಳಿಗೂ ಇದೇ ಮಾದರಿಯಲ್ಲಿ ಅನುಷ್ಠಾನ ಮಾಡಬೇಕೆಂದು ಬಯಸಿದೆ. ಆದರೆ, ಈ ಮಕ್ಕಳನ್ನು ಪತ್ತೆ ಮಾಡುವುದು ಅಷ್ಟು ಸಲೀಸಲ್ಲ.

ಕೃಷಿ ಕಾರ್ಮಿಕರ ಮಕ್ಕಳನ್ನು ಗುರುತಿಸಲು ಸರ್ಕಾರದ ಫ್ರೂಟ್ ಸಾಫ್ಟ್‌ವೇರ್ ಬಳಸಲಾಗುತ್ತಿದೆ. ಫ್ರೂಟ್‌ನಲ್ಲಿ ರೈತರ ಮಾಹಿತಿ ಇದ್ದರೆ, ಶಿಕ್ಷಣ ಇಲಾಖೆಯ ದಾಖಲೆಯಿಂದ ಮಕ್ಕಳ ದಾಖಲೆ ಪಡೆದು ಎರಡನ್ನೂ ಸಂಯೋಜಿಸಿ ಅರ್ಹರನ್ನು ಪರಿಗಣಿಸಲಾಗಿತ್ತು.

ಪ್ರಸ್ತುತ ಎರಡು ಶೈಕ್ಷಣಿಕ ವರ್ಷದಲ್ಲಿ 10.19 ಲಕ್ಷ ರೈತರ ಮಕ್ಕಳಿಗೆ 465.15 ಕೋಟಿ ರೂ.ವನ್ನು ನೇರ ನಗದು ವರ್ಗಾವಣೆ (ಡಿಬಿಟಿ) ಮಾರ್ಗದಲ್ಲಿ ಜಮಾ ಮಾಡಲಾಗಿದೆ. ಜತೆಗೆ ಈ ಯೋಜನೆಯ ಪರಿಣಾಮ ಅರಿತ ಸಿಎಂ, ಅದನ್ನು ಬೇರೆ ವರ್ಗದವರಿಗೂ ವಿಸ್ತರಿಸುವುದಾಗಿ ಘೋಷಿಸಿದ್ದರು.

ಒಂದು ಅಂದಾಜಿನ ಪ್ರಕಾರ ಭೂರಹಿತ ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನಕ್ಕೆ ಈ ಸಾಲಿನಲ್ಲಿ 360 ಕೋಟಿ ರೂ. ತೆಗೆದಿಟ್ಟಿದೆ. ಹತ್ತು ವರ್ಷದ ಹಿಂದಿನ ಜನಗಣತಿ ಪ್ರಕಾರ ಕರ್ನಾಟಕದಲ್ಲಿ 71.55 ಲಕ್ಷ ಕೃಷಿ ಕಾರ್ಮಿಕರಿದ್ದು, ಒಂದು ಕುಟುಂಬದಲ್ಲಿ ನಾಲ್ಕು ಜನರಂತೆ 18 ಲಕ್ಷ ಕೃಷಿ ಕಾರ್ಮಿಕ ಕುಟುಂಬಗಳಿವೆ. ಅವರಲ್ಲಿ ಮೂರನೇ ಒಂದು ಭಾಗದಷ್ಟು ಎಂದರೆ ಆರು ಲಕ್ಷ ಮಕ್ಕಳಿರಬಹುದು, ಇದರಲ್ಲಿ 4 ಲಕ್ಷದಷ್ಟು ಮಕ್ಕಳು ಈ ಯೋಜನೆ ವ್ಯಾಪ್ತಿಗೆ ಬರಬಹುದು ಎಂದು ಆಂದಾಜಿಸಲಾಗಿದೆ. 'ನಾವು ಜನಗಣತಿ ಲೆಕ್ಕದಲ್ಲಿ ಈ ಆಂದಾಜು ಮಾಡಿದ್ದು, ಈ ಸಂಖ್ಯೆ ಬೇರೆ ಇರಲಿದೆ. ಯೋಜನೆ ಆರಂಭಿಸಿ ನಂತರ ಅದರ ವ್ಯಾಪ್ತಿ ಹಿಗ್ಗುತ್ತಾ ಸಾಗಲಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ವಿಜಯವಾಣಿಗೆ ತಿಳಿಸಿದ್ದಾರೆ.



ಸಾಂದರ್ಭಿಕ ಚಿತ್ರ

₹2-11 ಸಾವಿರ ನೆರವು

ವಿದ್ಯಾನಿಧಿ ಅನ್ವಯ ಪ್ರೌಢಶಾಲೆ (ಹೆಣ್ಣುಮಕ್ಕಳಿಗೆ ಮಾತ್ರ), ಪಿಯುಸಿ, ಐಟಿಐ, ಪದವಿ, ಎಲ್‌ಎಲ್‌ಬಿ, ಫಾರಾಮೆಡಿಕಲ್, ಬಿ.ಫಾರ್ಮಾ, ಎಂಬಿಬಿಎಸ್, ಇಂಜಿನಿಯರಿಂಗ್ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಓದುತ್ತಿರುವ ಭೂಮಿ ಹೊಂದಿದ ಕೃಷಿಕರ ಮಕ್ಕಳಿಗೆ 2 ಸಾವಿರದಿಂದ 11 ಸಾವಿರ ರೂ. ವರೆಗೆ ಮಾಸಿಕ ನೆರವು ನೀಡಲಾಗುತ್ತಿದೆ.

ಮಾಹಿತಿಗೆ ಹರಸಾಹಸ

ಅರ್ಜಿ ಸಲ್ಲಿಸುವುದು, ಪಾಕಲಾತಿ, ಪರಿಶೀಲನೆ ಒಂದು ಭಾಗವಾದರೆ, ವಿದ್ಯಾರ್ಥಿಗಳು ಮತ್ತು ಪಾಲಕರ ಪರದಾಟ ಇನ್ನೊಂದು ಕಡೆ. ಮಧ್ಯವರ್ತಿಗಳ ಹಾವಳಿ ಕೂಡ ತಲೆ ಎತ್ತಲಿದೆ. ಈ ಕಾರಣಕ್ಕೆ ಅರ್ಜಿ ಸ್ವೀಕರಿಸದೆ ಅರ್ಹ ಮಕ್ಕಳನ್ನು ಪತ್ತೆಮಾಡಲು ಉದ್ದೇಶಿಸಲಾಗಿದೆ. ಪ್ರಮುಖವಾಗಿ ನರೇಗಾ ಜಾಬ್ ಕಾರ್ಡ್ ದಾಖಲೆಯನ್ನು ಬಳಸಿಕೊಳ್ಳಲಾಗುತ್ತದೆ. ಜತೆಗೆ ಬೇರೆ ಬೇರೆ ವಿದ್ಯಾರ್ಥಿ ಯೋಜನೆಗಳ ಫಲಾನುಭವಿಗಳನ್ನು ತಾಳೆ ನೋಡಿ ಅರ್ಹರನ್ನು ಆಯ್ಕೆ ಮಾಡಲಾಗುತ್ತಿದೆ. ಬಾಗಲಕೋಟೆ, ಹಾವೇರಿ, ಶಿವಮೊಗ್ಗದಲ್ಲಿ ಪ್ರಾಯೋಗಿಕವಾಗಿ ಪ್ರಯತ್ನಗಳು ನಡೆಯುತ್ತಿವೆ. ಶೀಘ್ರವೇ ಸ್ಪಷ್ಟತೆ ಬರಲಿದ್ದು ಆರಂಭಿಕವಾಗಿ ಎರಡು ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಜನವರಿಯಲ್ಲೇ ಜಮಾ ಮಾಡುವ ಉದ್ದೇಶವಿದೆ ಎಂದು ಮೂಲಗಳು ತಿಳಿಸಿವೆ. ಬ್ಯಾಂಕ್ ಖಾತೆಯನ್ನೂ ಹೊಂದಿರದವರು ಅಥವಾ ಜನವಸತಿಯಿಂದ ದೂರದಲ್ಲಿ ನೆಲೆಸಿರುವವರೂ ಸಿಗಬಹುದು. ಅಂತಹವರನ್ನೂ ಗಮನದಲ್ಲಿಟ್ಟು ಕೊಂಡು ಯೋಜನೆ ರೂಪಿಸಲಾಗುತ್ತಿದೆ. ಅರ್ಜಿ ಸಲ್ಲಿಕೆಗೂ ಅವಕಾಶ ಕೊಡುವ ಮೂಲಕ ಹೈಬ್ರಿಡ್ ರೂಪದಲ್ಲಿ ಯೋಜನೆ ಜಾರಿ ಮಾಡುವ ಉದ್ದೇಶವಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

Vijayavani
Pg.04

ಕಬ್ಬಿಗೆ ಬೇಕಿದೆ ಗುಜರಾತ್ ಮಾದರಿ ಪರಿಹಾರ

■ ಮಲ್ಲಿಕಾರ್ಜುನ ಹೆಗ್ಗಳಿಗಿ



ಕಬ್ಬು ಸಿಹಿ. ಆದರೆ, ಕಬ್ಬಿನ ವ್ಯವಹಾರ ಗೊಂದಲಗಳಿಂದ ಕೂಡಿದೆ. ಕಬ್ಬಿನ ಬೆಲೆ ನಿಗದಿ, ಬಾಕಿ ಉಳಿಸಿಕೊಂಡ ಹಣ ಪಾವತಿ, ಸಮಯಕ್ಕೆ ಸರಿಯಾಗಿ ಪಕ್ವಗೊಂಡ ಕಬ್ಬು ಕಟಾವು ಮಾಡಿ ಕಾರ್ಖಾನೆಗಳಿಗೆ ಸಾಗಿಸುವುದಕ್ಕಾಗಿ ರೈತರು ವರ್ಷವಿಡಿ ತೊಂದರೆ ಅನುಭವಿಸುತ್ತಿದ್ದಾರೆ. ಇವು ಬಗೆಹರಿಸಲಾರದಷ್ಟು ಕಠಿಣ ಸಮಸ್ಯೆಗಳೇನಲ್ಲ. ಕಾರ್ಖಾನೆಗಳ ಆಡಳಿತ ಮಂಡಳಿಯವರ ಬದ್ಧತೆಹಾಗೂ ಸರಕಾರದ ಬಗ್ಗು ನಿಲುವಿನ ಕೊರತೆಯಿಂದ ಕಬ್ಬು ಬೆಳೆಗಾರರು ಸಂಕಷ್ಟ ಅನುಭವಿಸುತ್ತಿದ್ದಾರೆ. ಕಬ್ಬು ಬೆಳೆಗಾರರು ತಮ್ಮ ಬೇಡಿಕೆಗಳ ಈಡೇರಿಕೆಗೆ ಬೆಳಗಾವಿಯ ಅಧಿವೇಶನ ಸಮಯದಲ್ಲಿ ಹೋರಾಟ ಮಾಡಬೇಕಾಗಿ ಬಂದದ್ದು ಯಾವ ಸರಕಾರಕ್ಕೂ ಭೂಷಣವಲ್ಲ.

ಗುಜರಾತ್ ಮಾದರಿ ಕಬ್ಬು ಬೆಳೆಗಾರರ ಸಮಸ್ಯೆಗಳ ಶಾಶ್ವತ ಪರಿಹಾರಕ್ಕೆ ಸರಳ ಮಾರ್ಗವಾಗಿದೆ. ರಾಜ್ಯದ ಹತ್ತು ಜನ ಕಬ್ಬು ಬೆಳೆಗಾರರು ಹಾಗೂ ಸಕ್ಕರೆಯ ತಂತ್ರಜ್ಞರು ಈಚೆಗೆ ಗುಜರಾತ್‌ಗೆ ಭೇಟಿ ನೀಡಿ ಅಧ್ಯಯನ ನಡೆಸಿದ್ದಾರೆ. ಈ ತಂಡದಲ್ಲಿ ನಾನೂ ಭಾಗವಹಿಸಿದ್ದೆ.



ಗುಜರಾತ್ ಸರಕಾರ ಸಕ್ಕರೆ ಕೈಗಾರಿಕೆ ತುಂಬಾ ಶಿಸ್ತುಬದ್ಧವಾಗಿ ನಡೆಯುತ್ತಿದೆ. ಇದು ಎಲ್ಲರೂ ಅನುಸರಿಸಬಹುದಾದ ಮಾದರಿಯಾಗಿದೆ. ಕಬ್ಬು ಪೂರೈಸಿದ 14 ದಿನಗಳ ಒಳಗಾಗಿ ಮೊದಲು ಕಂತಿನ ಹಣ ಪ್ರತಿ ಟನ್‌ಗೆ 2500 ರೂ. ಕಡ್ಡಾಯವಾಗಿ ಪಾವತಿ ಮಾಡಬೇಕು ಎಂಬ ನಿಯಮವನ್ನು ಗುಜರಾತ್ ಸರಕಾರ ಜಾರಿ ಮಾಡಿದೆ. ಕಾರ್ಖಾನೆ ಬಾಕಿ ಉಳಿಸಿಕೊಂಡರೆ ಮರುದಿನವೇ ಗುಜರಾತ್ ಕೃಷಿ ಇಲಾಖೆ ಕಾರ್ಖಾನೆ ಬಾಕಿ ಉಳಿಸಿಕೊಂಡ ಹಣ ರೈತರ ಬ್ಯಾಂಕ್ ಖಾತೆಗೆ ಪಾವತಿ ಮಾಡುತ್ತದೆ. ಈ ಬಗ್ಗೆ ಕೃಷಿ ಇಲಾಖೆ ಪ್ರತಿಕಾರ್ಖಾನೆಗಳಲ್ಲಿ ಪ್ರಕಟಣೆ ನೀಡಿ ಸಾರ್ವಜನಿಕರಿಗೆ ಮಾಹಿತಿ ನೀಡುತ್ತದೆ. ಇದರಿಂದ ಕಾರ್ಖಾನೆಗಳ ಆಡಳಿತ ಮಂಡಳಿಯವರು ಅಪಮಾನಕ್ಕೆ ಗುರಿಯಾಗಬೇಕಾಗುತ್ತದೆ. ಕೃಷಿ ಇಲಾಖೆ ರೈತರಿಗೆ ಪಾವತಿಸಿದ ಹಣವನ್ನು ಬಡ್ಡಿಸಹಿತ ವಸೂಲು ಮಾಡುತ್ತದೆ. ಕಾರ್ಖಾನೆ ಸರಕಾರದ ಈ ಹಣ ಕೊಡುವುದು ವಿಳಂಬ ಮಾಡಿದರೆ ಭೂ ಕಂದಾಯ ಬಾಕಿಯಾಗಿ ವಸೂಲು ಮಾಡಲಾಗುತ್ತದೆ. ಕಬ್ಬು ನುರಿಸುವ ಹಂಗಾಮು ಮುಗಿದ ಒಂದು ವಾರದಲ್ಲಿ ಬೆಲೆ ನಿಗದಿಯ ಪ್ರಕಾರ ಬಾಕಿ ಉಳಿದಿರುವ ಎರಡನೇ ಕಂತಿನ ಹಣವನ್ನು ಪೂರ್ಣ ಪಾವತಿ ಮಾಡಬೇಕು.

2ನೇ ಕಂತಿನ ಹಣ ಪಾವತಿ ಮಾಡುವುದನ್ನು ಕಾರ್ಖಾನೆ ವಿಳಂಬ ಮಾಡಿದರೆ ಮತ್ತೆ ಕೃಷಿ ಇಲಾಖೆ ಪಾವತಿ ಮಾಡಿ, ಬಾಕಿ ಕಾರ್ಖಾನೆಯಿಂದ ಮಾಡಲು ಕ್ರಮ ಕೈಗೊಳ್ಳುತ್ತದೆ. ದೇಶದಲ್ಲಿಯೇ ಗುಜರಾತ್ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬಿಗೆ ಅತಿಹೆಚ್ಚು ಬೆಲೆ ನೀಡುತ್ತಿರುವುದು ಬಹುದೊಡ್ಡ ಸಾಧನೆಯಾಗಿದೆ. 2020-21ನೇ ಸಾಲಿನಲ್ಲಿ ಗುಜರಾತ್ ಕಾರ್ಖಾನೆಗಳು ಪ್ರತಿ ಟನ್‌ಗೆ 3500 ರೂ. ಪಾವತಿ ಮಾಡಿವೆ. ದೇಶದ ಇತರ ಎಲ್ಲ ಕಾರ್ಖಾನೆಗಳೂ 2700 ರಿಂದ 3000 ರೂ.ವರೆಗೆ ಪಾವತಿ ಮಾಡಿವೆ. ಇದು ಗಮನಿಸಬೇಕಾದ ಮುಖ್ಯ ವ್ಯತ್ಯಾಸ.

ಗುಜರಾತ್ ರಾಜ್ಯದಲ್ಲಿ ಒಟ್ಟು 19 ಸಕ್ಕರೆ ಕಾರ್ಖಾನೆಗಳಿವೆ. ಇವೆಲ್ಲವೂ ಸಹಕಾರಿ ಸಂಘಕ್ಕೆ ಸೇರಿವೆ. ಗುಜರಾತ್‌ನಲ್ಲಿ ಒಂದೂ ಖಾಸಗಿ ಸಕ್ಕರೆ ಕಾರ್ಖಾನೆ ಇಲ್ಲವೆಂಬುದು ಗಮನಿಸಬೇಕಾದ ಸಂಗತಿ. ಅಲ್ಲಿ ಖಾಸಗಿ ರಂಗದ ಸಕ್ಕರೆ ಕಾರ್ಖಾನೆಗಳನ್ನು ಕಬ್ಬುವುದಕ್ಕೆ ಮತ್ತು ಸಹಕಾರಿ ಕಾರ್ಖಾನೆಗಳನ್ನು ಖಾಸಗಿಯವರಿಗೆ ಹಸ್ತಾಂತರಿಸುವುದಕ್ಕೆ ಗುಜರಾತ್ ರಾಜ್ಯ ಸಹಕಾರಿ ಸಕ್ಕರೆಯ ಉದ್ಯೋಗ ಒಕ್ಕೂಟ ತೀವ್ರ ವಿರೋಧ ಹೊಂದಿದೆ. ಖಾಸಗಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಈ ಒಕ್ಕೂಟ ಅವಕಾಶ ಕೊಡುವುದೇ ಇಲ್ಲ.

ಗುಜರಾತ್ ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿನಿಂದ 120 ಕಿಲೋದಿಂದ 130 ಕಿಲೋ ಸಕ್ಕರೆ ಉತ್ಪಾದಿಸುತ್ತಿವೆ. ಕರ್ನಾಟಕದ ಕಾರ್ಖಾನೆಗಳು ಒಂದು ಟನ್ ಕಬ್ಬಿನಿಂದ 100-110 ಕಿಲೋ ಸಕ್ಕರೆ ಉತ್ಪಾದಿಸುತ್ತಿವೆ. ಕರ್ನಾಟಕದ ಸರಾಸರಿ ಸಕ್ಕರೆ ಇಳುವರಿ ಪ್ರತಿ ಟನ್‌ಗೆ 100 ಕಿಲೋ ಮಾತ್ರ ಇದೆ. ಸರಕಾರ ಮತ್ತು ರೈತರು ಎಚ್ಚೆತ್ತುಕೊಂಡು ಬದಲಾವಣೆಗೆ ಮುಂದಡಿ ಬರೆಯಬೇಕು.

(ಲೇಖಕರು: ಸಕ್ಕರೆ ವಿಜ್ಞಾನ ತಂತ್ರಜ್ಞರು, ಮುಧೋಳ)

Vijaya Karnataka
Pg.02

Vijaya Karnataka
Pg.08

ಅಡಕೆ ಕಾರ್ಯಪಡೆ ಅಧ್ಯಕ್ಷರೂ ಆದ ಸಚಿವ ಆರಗ ಭರವಸೆ | ಬೆಳೆ ವಿಸ್ತರಣೆ ಮಾಡದಂತೆ ಮನವಿ

ಅಡಕೆ ಎಲೆಚುಕ್ಕಿ ನಷ್ಟಕ್ಕೆ ಪರಿಹಾರ

■ ವಿಕ ಸುದ್ದಿಲೋಕ ಬೆಳಗಾವಿ



ಎಲೆಚುಕ್ಕಿ ರೋಗದಿಂದ ಹಾಳಾಗಿರುವ ಅಡಕೆ ಬೆಳೆಗೆ ಪರಿಹಾರ ವಿತರಿಸುವ ಬಗ್ಗೆ ಸರಕಾರ ಚಿಂತನೆ ನಡೆಸಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ಬುಧವಾರ ವಿಧಾನಸಭೆ ಪ್ರಶ್ನೋತ್ತರ ವೇಳೆಯಲ್ಲಿ ತೋಟಗಾರಿಕೆ ಸಚಿವರ ಪರವಾಗಿ ಉತ್ತರಿಸಿದ ಅವರು, ''ಹಲವೆಡೆ ಅಡಕೆ ತೋಟಗಳು ಸಂಪೂರ್ಣ ಹಾಳಾಗಿವೆ. ಸಿಎಂ ಬೊಮ್ಮಾಯಿ ಖುದ್ದು ತೋಟಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ನಷ್ಟಕ್ಕೀಡಾಗಿರುವ ರೈತರಿಗೆ ಪರಿಹಾರ ನೀಡಲು ಸರಕಾರದ ಮಟ್ಟದಲ್ಲಿ ಚಿಂತನೆ ನಡೆದಿದೆ,'' ಎಂದು ಸದನಕ್ಕೆ ತಿಳಿಸಿದರು.

''ರೋಗ ನಿಯಂತ್ರಣಕ್ಕೆ ಸಂಶೋಧನೆಯೊಂದೇ ಶಾಶ್ವತ ಪರಿಹಾರ. ಅಮೂಲಾಗ್ರ ಸಂಶೋಧನೆ ನಡೆಸಲು ಕೃಷಿ ವಿಜ್ಞಾನಿಗಳಿಗೆ ನಿರ್ದೇಶಿಸಲಾಗಿದೆ. ಇದಕ್ಕಾಗಿ 4.39 ಕೋಟಿ ರೂ. ಒದಗಿಸಲಾಗಿದೆ. ಔಷಧ ಸಿಂಪಡಣೆಗೆ 80 ಎಡಿವರೆಗಿನ ದೋಟಿ ಖರೀದಿಸಲು 30 ಸಾವಿರ ರೂ. ಸಬ್ಸಿಡಿ ಕೊಡಲು 21 ಕೋಟಿ ರೂ. ಅನುದಾನ ನೀಡಲಾಗಿದೆ,'' ಎಂದು ತಿಳಿಸಿದರು.

ವಿಸ್ತರಣೆ ಬೇಡ: ಉತ್ತಮ ಬೆಲೆ ಕಾರಣ ಮಲೆನಾಡು ಜಿಲ್ಲೆಗಳಲ್ಲಿ ಕಾಫಿ, ಭತ್ತ ಬೆಳೆ ಬದಲಿಗೆ ಅಡಕೆ ಸಿಸಿ ನೆಡಲಾಗಿದೆ. ಇತರ ಭಾಗಗಳಲ್ಲೂ ಬೆಳೆ ವಿಸ್ತರಣೆ ದೊಡ್ಡ ಮಟ್ಟದಲ್ಲಿ ಆಗುತ್ತಿದೆ. ಆದರೆ, ಮಾರುಕಟ್ಟೆ ಅವಕಾಶ ಸೀಮಿತವಾಗಿದೆ. ಹಾಗಾಗಿ, ಅಡಕೆ ಬೆಳೆ ವಿಸ್ತರಿಸುವುದು ಬೇಡ. ಹಳೆ ತೋಟಗಳ ರಕ್ಷಣೆ ಮಾತ್ರ ಆದ್ಯತೆಯಾಗಲಿ,'' ಎಂದು ಅಡಕೆ ಕಾರ್ಯಪಡೆ ಅಧ್ಯಕ್ಷರೂ ಆದ ಆರಗ ಜ್ಞಾನೇಂದ್ರ ಮನವಿ ಮಾಡಿದರು.

''ಎಲೆಚುಕ್ಕಿ ರೋಗ 1962ರಿಂದ ಇದೆಯಾದರೂ, 2 ವರ್ಷಗಳಿಂದ ಹೆಚ್ಚಾಗಿದೆ. ಬೇಸಿಗೆಯಲ್ಲೂ ಮಳೆ ಬೀಳುವಂತಹ ಹವಾಮಾನ ವೈಪರೀತ್ಯವೇ ಇದಕ್ಕೆ ಕಾರಣ,'' ಎಂದರು.



ಮಿತಿ ಮೀರಿದ ರಾಸಾಯನಿಕ ಬಳಕೆಯಿಂದ ರೋಗ ಉಲ್ಬಣಗೊಳ್ಳುತ್ತಿದೆ ಎಂದು ಹೇಳಲಾಗುತ್ತಿದೆ. ಈವರೆಗೂ ಸೂಕ್ತ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಶಾಶ್ವತ ಪರಿಹಾರ ನಿಟ್ಟನಲ್ಲಿ ಕೃಷಿ ವಿಜ್ಞಾನಿಗಳು ಸಮಗ್ರ ಅಧ್ಯಯನ ನಡೆಸಲಿ.

- ಸಿ.ಟಿ. ರವಿ ಬಿಜೆಪಿ ಶಾಸಕ



ಇದೊಂದು ಪಾರಂಪರಿಕ ಕಾಯಿಲೆ. ಕೃಷಿ ವಿಜ್ಞಾನ ಕೇಂದ್ರ ಹಾಗೂ ವಿ.ವಿ.ಗಳಲ್ಲಿ ಯಾವುದೇ ಸಂಶೋಧನೆ ನಡೆಯುತ್ತಿಲ್ಲ. ಹೀಗಾದರೆ, ವಿ.ವಿ.ಗಳು ಏಕೆ? ವಿಜ್ಞಾನಿಗಳು ಏಕಿರಬೇಕು?

-ಕೆ.ಆರ್. ರಮೇಶ್ ಕುಮಾರ್
ಕಾಂಗ್ರೆಸ್ ಶಾಸಕ

ಕೊಬ್ಬರಿ ಬೆಂಬಲ ಬೆಲೆ ಪರಿಷ್ಕರಣೆ ಕೇಂದ್ರ ಸರಕಾರಕ್ಕೆ ಮನವಿ: ಸಿಎಂ

ಕ್ವಿಂಟಾಲ್‌ಗೆ 3 ಸಾವಿರ ಪರಿಹಾರಕ್ಕೆ ಆಗ್ರಹ

■ ವಿಕ ಸುದ್ದಿಲೋಕ ಬೆಳಗಾವಿ

ಕೊಬ್ಬರಿ ಬೆಲೆ ಕುಸಿತದಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ತೆಂಗು ಬೆಳೆಗಾರರ ರಕ್ಷಣೆಗಾಗಿ ಕೊಬ್ಬರಿ ಬೆಂಬಲ ಬೆಲೆ ಪರಿಷ್ಕರಣೆ ಮಾಡುವಂತೆ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಲು ರಾಜ್ಯ ಸರಕಾರ ಮುಂದಾಗಿದೆ.

40 ಶಾಸಕರು ಗೆಲ್ಲಲು ತೆಂಗು ಬೆಳೆಗಾರರ ಮತಗಳು ಅಗತ್ಯ ಎಂದ ಶಾಸಕ ಶಿವಲಿಂಗೇಗೌಡ

ವಿಧಾನಸಭೆಯಲ್ಲಿ ಬುಧವಾರ ಜೆಡಿಎಸ್‌ನ ಕೆ.ಎಂ. ಶಿವಲಿಂಗೇಗೌಡ, ಸಿ.ಎನ್. ಬಾಲಕೃಷ್ಣ, ಸಾ.ರಾ. ಮಹೇಶ್, ಎಂ.ಅಶ್ವಿನ್ ಕುಮಾರ್ ಪ್ರಸ್ತಾಪಿಸಿದ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಸಿಎಂ ಬೊಮ್ಮಾಯಿ, ''ಬೆಳೆಗಾರರ ಸಂಕಷ್ಟ ಗಮನಕ್ಕೆ ಬಂದಿದೆ. ಸದ್ಯ ಕ್ವಿಂಟಾಲ್ ಕೊಬ್ಬರಿಗೆ ಎಂಎಸ್‌ಪಿ 11,000 ರೂ. ಇದ್ದು, ದರ ಪರಿಷ್ಕರಣೆಗೆ ಕೇಂದ್ರಕ್ಕೆ ಮನವಿ ಮಾಡಲಾಗುವುದು. ಸಂಬಂಧಪಟ್ಟ ಕೇಂದ್ರ ಸಚಿವರೊಂದಿಗೂ ಮಾತುಕತೆ ನಡೆಸಲಾಗುವುದು,'' ಎಂದು ಭರವಸೆ ನೀಡಿದರು.

ಇದಕ್ಕೂ ಮೊದಲು ಶಿವಲಿಂಗೇಗೌಡ, ''11 ವರ್ಷಗಳಿಂದ ದರ ಪರಿಷ್ಕರಿಸಿಲ್ಲ. 40 ಶಾಸಕರು ಗೆಲ್ಲಲು ತೆಂಗು ಬೆಳೆಗಾರರ ನೆರವು ಅಗತ್ಯ. ಕೂಡಲೇ ಎಂಎಸ್‌ಪಿ ಪರಿಷ್ಕರಿಸಬೇಕು,'' ಎಂದು ಆಗ್ರಹಿಸಿದರು.

ಉಂಡೆ ಕೊಬ್ಬರಿಗೆ ನಿಗದಿಪಡಿಸಿರುವ ಬೆಂಬಲ ಬೆಲೆ ಅವೈಜ್ಞಾನಿಕವಾಗಿದ್ದು, ಹೆಚ್ಚಿನ ಬೆಲೆ ನೀಡಬೇಕು ಹಾಗೂ ಎಲ್ಲ ರೈತರಿಂದ ಯಾವುದೇ ಮಿತಿಯಿಲ್ಲದೆ ರಾಗಿ ಖರೀದಿಸಬೇಕು ಎಂದು ಆಗ್ರಹಿಸಿ ತಿಪಟೂರಿನ ಕಾಂಗ್ರೆಸ್ ಮುಖಂಡ ಸಿ.ಬಿ. ಶಶಿಧರ್ ಟೂಡಾ ಮತ್ತು ಅವರ ಬೆಂಬಲಿಗರು ಬುಧವಾರ ಸುವರ್ಣ ವಿಧಾನಸೌಧ ಸಮೀಪದ ಬಸ್ತವಾಡ ಪ್ರತಿಭಟನಾ ವೇದಿಕೆಯಲ್ಲಿ ಪ್ರತಿಭಟನೆ ನಡೆಸಿದರು.

ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ವಿಶ್ವಪ್ರಸಿದ್ಧ ಉಂಡೆ ಕೊಬ್ಬರಿಯ ಬೆಲೆ ಇತ್ತೀಚೆಗೆ ಕುಸಿದಿದೆ. ಹವಾಮಾನ ವೈಪರೀತ್ಯದಿಂದಾಗಿ ಗುಣಮಟ್ಟ ಕಡಿಮೆಯಾಗುತ್ತಿದ್ದು, ಕಡಿಮೆ ಬೆಲೆಗೆ ಮಾರಾಟ ಮಾಡುವ ಪರಿಸ್ಥಿತಿ ಬಂದಿದೆ. 2021ನೇ ಸಾಲಿನಲ್ಲಿ ಕೇಂದ್ರ ಸರಕಾರ ಕ್ವಿಂಟಾಲ್‌ಗೆ ಕೇವಲ ರೂ.11,000 ಬೆಂಬಲ ಬೆಲೆ ನಿಗದಿಪಡಿಸಿದೆ. ಇದರಿಂದ ಭಾರಿ ನಷ್ಟವಾಗುತ್ತಿದೆ. ಹೀಗಾಗಿ, ಕ್ವಿಂಟಾಲ್‌ಗೆ 3,000 ರೂ. ಪರಿಹಾರ ಕೊಡಬೇಕು ಎಂದು ಆಗ್ರಹಿಸಿದರು.

ಸರಕಾರ ಪ್ರಸ್ತುತ ಸಣ್ಣ ಮತ್ತು ಅತೀಸಣ್ಣ ರೈತರಿಂದ ಮಾತ್ರ ರಾಗಿ ಖರೀದಿಸುತ್ತಿದೆ. ಆದರೆ, ರಾಗಿ ಬೆಳೆದ ಎಲ್ಲ ರೈತರಿಂದಲೂ ಯಾವುದೇ ಮಿತಿಯಿಲ್ಲದೇ ರಾಗಿ ಖರೀದಿಸಬೇಕು ಎಂದು ಆಗ್ರಹಿಸಿದರು.



ಸುವರ್ಣ ವಿಧಾನಸೌಧದ ಬಳಿ ತುಮಕೂರು ಜಿಲ್ಲೆಯ ತಿಪಟೂರಿನ ತೆಂಗು ಬೆಳೆಗಾರರು ಬುಧವಾರ ಪ್ರತಿಭಟನೆ ನಡೆಸಿದರು.

Vijaya Karnataka
Pg.08

ಭಾರತ್ ಸ್ಕೌಟ್ಸ್‌ಮತ್ತು ಗೈಡ್ಸ್
ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ 2022
ಡಿಸೆಂಬರ್ 21 ರಿಂದ 27
ಆಳ್ವಾಸ್ ಆವರಣ, ವಿದ್ಯಾಗಿರಿ, ಮೂಡುಬಿದಿರೆ

ಮೂಡುಬಿದಿರೆಯಲ್ಲಿ ಜಾಂಬೂರಿ ಮಹಾ ಸಂಗಮ

ವಿರಾಟ್ ಕಲಾ ದರ್ಶನ ತೆರೆದಿಟ್ಟ ಸ್ಕೌಟ್ಸ್ ಗೈಡ್ಸ್ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಮಹಾ ಪರ್ವ

ಸುಧಾಕರ ಮೂಲಿಯ ಮೂಡುಬಿದಿರೆ
sudhakara.karnadamoole@timesgroup.com



ಸಾಂಸ್ಕೃತಿಕ ಕಾರ್ಯಕ್ರಮ ಸರಣಿ

ಬುಧವಾರ ಬೆಳಿಗ್ಗೆ ಯಕ್ಷಗಾನ ಕಟ್ಟುವ ಸಂಕಲ್ಪದಲ್ಲಿ ಜಾಂಬೂರಿ ಕಲಾಲೋಕ ಉದ್ಘಾಟನೆಯಾಯಿತು. ಇದಾದ ಬಳಿಕ ಸುಡಿಸಿರಿ ಸುಗಾಂಗ, ವಿ.ಎಸ್. ಆಚಾರ್ಯ ಸುಗಾಂಗ, ರಾಷ್ಟ್ರಪತಿ ಪದಕ ವಿಜೇತ ಕೃಷ್ಣ ಸಿ.ಎ. ಸುಬ್ಬಣ್ಣ ಬಯಲು ರಂಗ ಮಂದಿರದಲ್ಲಿ ಕಾರ್ಯಕ್ರಮ ಚಾಲನೆಗೊಂಡಿತು. 7 ದಿನಗಳ ಕಾಲ ನಿರಂತರ 5 ವೇದಿಕೆಗಳಲ್ಲಿ ಸಾಂಸ್ಕೃತಿಕ ದರ್ಶನಗೊಳಲಿದೆ.

ಕೃಷಿ ಫಲವಸ್ತು ಪ್ರದರ್ಶನದಲ್ಲಿ 2 ಸಾವಿರ ತಳಿಗಳ ವಿರಾಟ್ ದರ್ಶನ





ಕೃಷಿ ಮೇಳ ಮೈದಾನದಲ್ಲಿ ಆಯೋಜಿಸಿರುವ ಕೃಷಿ ಫಲ ಮತ್ತು ಪ್ರದರ್ಶನ ಬರೋಬ್ಬರಿ 2 ಸಾವಿರ ವಾಣಿ ತಳಿಗಳ ಸಂಗ್ರಹವನ್ನೊಂದಿಗೆ ಕಂಗೊಳಿಸುತ್ತಿದೆ. 150 ಬಗೆಯ ಬಾಳೆಗೊನೆಗಳು, ದೇಶ ವಿದೇಶ ಗಳಿಗೆ 750 ಬಗೆಯ ಭತ್ತದ ತಳಿಗಳು, 100 ಬಗೆಯ ಅಕ್ಕಿ, ವಿದೇಶದಿಂದ ತರಿಸಲಾದ ಬ್ರಹ್ಮ ಗಾತ್ರದ ತೆಂಗು, 15 ಬಗೆಯ ಅಡಕೆ ಗೊನೆ, ಸುಮಾರು 50 ಬಗೆಯ ಗಡ್ಡೆಗಳು, 4 ವಿಧದ ಹಲಸು, ಸುಮಾರು 450 ವಿಧದ ಔಷಧೀಯ ಸಸ್ಯಗಳು ಇಲ್ಲಿನ ಬೀಜಗಳು ಇಲ್ಲಿನ ಆಕರ್ಷಣೆಯಾಗಿವೆ.

ಭಾರೀ ಗಾತ್ರದ ಚಣಿಕಾಯಿ, ಸಣ್ಣ ಕರಳು, ಬೃಹತ್ ಗಾತ್ರದ ತೆಂಗಿನಕಾಯಿ ಇತ್ಯಾದಿ ಕಂಡು ಸ್ಕೌಟ್ಸ್, ಗೈಡ್ಸ್‌ಗಳು ಬೆರಗಾಗುತ್ತಿದ್ದಾರೆ. ತೆಂಗಿನ ಗರಟುಗಳಿಂದಲೇ ವಿಜ್ಞಾನ ಮಾಡಲಾದ ಸುಮಾರು 150 ಬಗೆಯ ಕಲಾ ಪ್ರಕಾರಗಳು ಇಲ್ಲಿ ಅಲಂಕಾರಗೊಂಡಿವೆ. ಕರಿದ ಮೂರು ತಿಂಗಳಿಂದ ಈ ಸಂಗ್ರಹಕ್ಕಾಗಿ ಕ್ರಮಿಸಲಾಗುತ್ತಿದೆ ಎಂದು ಫಲವಸ್ತು ಪ್ರದರ್ಶನ ಉಸ್ತುವಾರಿ ಚಿಂತನ್ ಆಚಾರ್ಯ ಎಂಬವರ ಮಾಹಿತಿ ನೀಡುತ್ತಾರೆ. ಕೇರಳದ ವಿನೋದ್ ನಾಯರ್ ಎಂಬವರ ಮೂಲಕ ದೇವ ವಿದೇಶಗಳ ಬಾಳೆ ಗೊನೆ ತಳಗಳನ್ನು ತರಿಸಲಾಗುವುದಾಗಿ ಅವರು ಹೇಳುತ್ತಾರೆ.



ಉಳಿದಂತೆ ಸಾಂಸ್ಕೃತಿಕ ಜಗತ್ತನ್ನು ಮೆರವಣಿಗೆಯಲ್ಲಿ, ಮೂಲಕ ಜಾಂಬೂರಿ ಮಹಾ ಪರ್ವಕ್ಕೆ ಚಾಲನೆ ನೀಡಲಾಯಿತು. ಸಾಂಸ್ಕೃತಿಕ ಜಾಂಬೂರಿಯಲ್ಲಿ ಸುಮಾರು 5 ಲಕ್ಷಕ್ಕಿಂತಲೂ ಅಧಿಕ ಆಸಾಮರ ಮೂಡಲಾಯಿತು. ವಿದೇಶ ಸೇರಿ ಕಾರ್ಯಕ್ರಮದ ಡಿ.21ರಂದಿಗೆ 21ರವರೆಗೆ ನಡೆಯಲಿದೆ ಅಂತಾರಾಷ್ಟ್ರೀಯ ಸಾರ್ವಜನಿಕರು ಭಾಗವಹಿಸುವ ನಿರೀಕ್ಷೆ ಇದೆ.

VK ಸಂಪರ್ಕ

ಸ್ವದೇಶಿ ಯುದ್ಧ ವಿಮಾನಗಳ ಶಕ್ತಿ ಪ್ರದರ್ಶನ



ಅಂತಾರಾಷ್ಟ್ರೀಯ ಜಾಂಬೂರಿಯಲ್ಲಿ ಭಾರತೀಯ ಯುದ್ಧ ವಿಮಾನಗಳ ಶಕ್ತಿ ಪ್ರದರ್ಶನ ವರ್ಚಸ್ಸಿನಲಾಗಿದೆ. ಡಿಸೆಂಬರ್ 21ರಂದು ಆಗಸ ಸಂಸ್ಥೆಯಾಗಿರುವ ಬೆಂಗಳೂರಿನ ವರ್ಚಸ್ಸಾಮರ್ಥ್ಯ ಡೆವಲಪ್‌ಮೆಂಟ್ ಮೆಂಟ್ ಏಜೆನ್ಸಿ (ಎಡಿಎ) ಈ ಪ್ರದರ್ಶನ ವರ್ಚಸ್ಸಿಸಲಿದೆ. ಸೂರ್ಯಕಿರಣ್ ಫೈಟರ್ ವಿಮಾನವಿರುವ ತೇಜಸ್ ಪುಟ್ಟ ರೂಪದಲ್ಲಿ ಇಲ್ಲಿ ಕೊಡಲಾಗುತ್ತಿದೆ. ಈ ಮಾದರಿಯ 40 ವಿಮಾನ ಅಗಲಗಳ ಉತ್ಪಾದನೆಯಾಗಿದ್ದು, ಎಚ್‌ಎಎಲ್‌ನಲ್ಲಿ 83 ವಿಮಾನಗಳು ಉತ್ಪಾದನಾ ಹಂತದಲ್ಲಿವೆ ಎಂದು ಎಡಿಎ ಗ್ರೂಪ್ ಡೈರೆಕ್ಟರ್ ಮಹೇಶ್ ಬಾಬು ತಿಳಿಸುತ್ತಾರೆ. ಇದಲ್ಲದೆ ಎಲ್‌ಸಿಎ ನೌಪಿ, ಎಲ್‌ಸಿಎ ಎಲ್‌ಎಚ್‌ಎ ಮಾರ್ಕ್-1 ಪ್ರದರ್ಶನಗೊಳ್ಳಲಿದೆ. ಅಗಾಗಲೇ ಎಡಿಎಲ್‌ನಲ್ಲಿ ವಿದ್ಯಾರ್ಥಿಗಳೊಂದಿಗೆ ಅವರು ವಿಮಾನ ಇಳಿದು ಇದು ಶಕ್ತಿ ದೇಶಗಳ ರಾಷ್ಟ್ರಧ್ವಜ ವಿಶೇಷಗಳಿಗೆ ಸಿಗುವುದಿಲ್ಲ ಎಂದು ಮಾಹಿತಿ ಬಾಬು.

ಇದರ ವಿಮಾನಗಳು ಕ್ಷಿಪಣಿಗಳನ್ನು ಹೊಂದಾಡಿಸಲಾಗಿದೆ. ಧ್ವನಿಯಂತೆ, ಈ ವಿಮಾನ ಮತ್ತು ಕ್ಷಿಪಣಿಗಳನ್ನು ಗುರುತಿಸಿಕೊಳ್ಳುತ್ತದೆ. ಇದು ಡೆಲ್ಲಾ ಎಂಜಿನ್ ಹೊಂದಿದೆ ಎಂದು ವಿವರಿಸಿದರು. ಯುದ್ಧ ವಿಮಾನಗಳ ಇದಾದ ಪ್ರದರ್ಶನಗಳು. ಕ್ಷಿಪಣಿಗಳು ಇತ್ಯಾದಿ ಪ್ರದರ್ಶನಗಳಾಗುತ್ತಿದ್ದು ಭಾರತೀಯ ಯುದ್ಧ ವಿಮಾನ ಶಕ್ತಿಯನ್ನು ಕಂಡು ವಿದ್ಯಾರ್ಥಿಗಳು ರೋಮಾಂಚನಗೊಳ್ಳುತ್ತಿದ್ದಾರೆ.

ಇದು ಹೂವಿನಾ ಲೋಕವೇ



ದೇಶ ವಿದೇಶಗಳಿಂದ ಬಂದಿರುವ 50 ಸಾವಿರ, ಸ್ಕೌಟ್ಸ್ ಗೈಡ್ಸ್‌ಗಳು, 10 ಸಾವಿರ ಶಿಕ್ಷಕರು ಮತ್ತು ಲಕ್ಷಾಂತರ ಸಾರ್ವಜನಿಕರ ಗಮನ ಜಾಂಬೂರಿಯ ಪುಷ್ಪ ಪ್ರದರ್ಶಕದಲ್ಲಿ ನೆಟ್ಟಿದೆ. ಕೇರಳ, ಕರ್ನಾಟಕ, ತಮಿಳುನಾಡು ಸೇರಿದಂತೆ ಪಾಪಾ ರಾಜ್ಯಗಳಲ್ಲಿ ಬೆಳೆಯುವ ವೈವಿಧ್ಯ ಮತ್ತು ವರ್ಣ ಗಡಿಗಳನ್ನು ಪ್ರದರ್ಶಿಸಲಾಗಿದೆ. ಬೆಳೆಗೆ ಸಿಂಗನಲಾಗಿದೆ. ಪ್ಯಾಗೋಡ, ಮಾಲಾಪುಷ್ಪಗಳಿಗೆಗಳು, ಗೊಬ್ಬರ ಅವುಗಳನ್ನು ಬಗೆಬಗೆಯ ಹೂಗಳಿಂದಲೇ ಮುಚ್ಚಲಾಗಿದೆ. ಪುಷ್ಪಪ್ರದರ್ಶನದಿಂದ ಕಂಗೊಳಿಸುತ್ತಿರುವ ಟೆಡ್ಡಿ ಬೇರ್ ಮಕ್ಕಳನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಹೂವಿನ ಆನೆ, ಹೂವಿನ ಚಿಟ್ಟೆ, ಹೂಗಿಂದಲೇ ಕಂಗಾರಿಸಿದ ಯಕ್ಷ ಕಂಠದ ದ್ವಾರ, ಪರ್ಣಾಲಗಳ ಕವಾಲು ಎಲ್ಲವೂ ಹೂವಿನಿಂದ ಮಾಡಿದ ಬೊಕಾಲಿನ ಸೃಷ್ಟಿವೆ.



ಸಾವಿರಕ್ಕೂ ಮಿಕ್ಕಿದ ವಿಜ್ಞಾನ ಮಾದರಿ

ಅಂತಾರಾಷ್ಟ್ರೀಯ ಜಾಂಬೂರಿಯಲ್ಲಿ ಅಯೋಜಿಸಿರುವಂತಿರುವ ವಿಜ್ಞಾನ ಮೇಳ ವಿದ್ಯಾರ್ಥಿಗಳ ಅವಿಷ್ಕಾರ ಶಕ್ತಿಯನ್ನು ಅನಾವರಣಗೊಳಿಸುತ್ತಿದೆ. ಇಲ್ಲಿ ಸಾವಿರಕ್ಕೂ ಅಧಿಕ ವಿಜ್ಞಾನ ಮಾದರಿಗಳು ಪ್ರದರ್ಶನಗೊಳ್ಳುತ್ತಿದ್ದು, ವಿಭಿನ್ನ ಒಂದಕ್ಕೊಂದು ವಿಭಿನ್ನವಾಗಿದೆ ಮತ್ತು ವಿಭಿನ್ನವು ಆಯಾ ವಿದ್ಯಾರ್ಥಿಗಳೇ ಅವಿಷ್ಕರಿಸಿದ್ದಾರೆ. ಈಗಾಗಲೇ ರಾಜ್ಯ, ರಾಷ್ಟ್ರಮಟ್ಟ ಜಾಗತಿಕ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿದ ಸ್ಕೌಟ್ಸ್‌ಮಾರ್ಗದರ್ಶಿಗಳು ಕೂಡ ಇಲ್ಲಿದ್ದಾರೆ. ಪ್ರತಿಯೊಂದಕ್ಕೂ ವಿದ್ಯಾರ್ಥಿ ವಿಜ್ಞಾನಿಗಳು ಸಂಬಂಧಿಸಿದಂತೆ ವಿವರಿಸುತ್ತಿರುವುದು ಕಂಡು ಬಂತು.

ಚಿತ್ರಕಲಾ ಸಾಮ್ರಾಜ್ಯ



ಆಳ್ವಾಸ್ ಕ್ಯಾಂಪಸ್‌ನ ಯಕ್ಷಗಾನ ಕಟ್ಟಡದಲ್ಲಿ ಪುಟಿಕೆಯಾಗಿ ಚಿತ್ರಕಲೆ ಮತ್ತು ಛಾಯಾಚಿತ್ರ ಪ್ರದರ್ಶನಕ್ಕೆ ಮೀಸಲಿಡಲಾಗಿದೆ. ಸುಮಾರಿಗಾಗಿ ಹಂಬ 100ಕ್ಕೂ ಅಧಿಕ ಛಾಯಾಗ್ರಾಹಕರು ಮಾಲ್ಗಡ ಚಿತ್ರ, ಕಲಾವಿದರು 7 ದಿನಗಳ ಹಂತ ಹಂತವಾಗಿ ಪೈಂಟಿಂಗ್ ಮಾಡಲಿದ್ದಾರೆ. ಇದರ ಕಂಬದಲ್ಲಿ ಅಳವಿರುವ ಚಿತ್ರಗಳು ಜಾಂಬೂರಿ ಸಮಾರೋಪದ ಮೇಳೆ ಹೊಸ ರೂಪ ಸೃಷ್ಟಿಸಲಿದೆ. ಜಾಂಬೂರಿಗೆಂದೇ ಆಹ್ವಾನಿಸಲಾದ ಛಾಯಾಚಿತ್ರಕಾರರು ಇಲ್ಲಿ ತಾವು ಸಾಧಿಸಿದ ಅಳವಿನಲ್ಲಿದ್ದಾರೆ. ರಾಷ್ಟ್ರಪ್ರಶಸ್ತಿ ಪುರಸ್ಕೃತ ಪರಿಸರ ಛಾಯಾಚಿತ್ರಗಾರ ಅಶೋಕ್ ಕಾಮತ್ ಅವರ ವಿದ್ಯಾರ್ಥಿಗಳೇ ಅವಿಷ್ಕಾರಿಸಿದ್ದಾರೆ. ಕಲಾವಿದ ಪಟ್ಟಾಭಿರಾಮ ಸೋಮಯಾಜಿ, ಪದ್ಮಶ್ರೀ ಪುರಸ್ಕೃತ ತಮ್ಮಂ, ಕೆಂಪ ಸೆಣಬಿ, ಬಿಳಲು, ಮಾಹಾಮಕ್ಕಳಭಿಷೇಕ, ಕೆಸರಿಗಾಲು, ಹುಲಿವೇಷ ಸೇರಿದಂತೆ ಸೂರಾರು ಬಣಜದ ಅಕರಣಗಳು, ತೈಲಚಿತ್ರ, ಪಶ್ಚಿಮಾಕ್ಷ ಭಾಯಾ ಚಿತ್ರಗಳು, ಬಿಮಾಲು, ಬಿಲ, ಕೆರೆ ಮುಂತಾದ ಚಿತ್ರಗಳು ಇವೆ. ಸಂಗ್ರಹಿಸಿರುವ 3 ಸಾವಿರ ಛಾಯಾಗ್ರಹಣ ಚಿತ್ರ 300ಕ್ಕಿಂತ ಚಿತ್ರಗಳು ಪ್ರದರ್ಶನದಲ್ಲಿ ಜಾಗ ಪಡೆದಿವೆ.

ಸಾವಿರಕ್ಕೂ ಮಿಕ್ಕಿದ ವಿಜ್ಞಾನ ಮಾದರಿ



ಅದ್ಭುತ ಆರಣ್ಯ ಲೋಕ

ಆರಣ್ಯ ಇಲಾಖೆಯ ಸಾರಥ್ಯದಲ್ಲಿ ಸುಮಾರು 10 ಲಕ್ಷ ರೂ. ವೆಚ್ಚದಲ್ಲಿ ಮಾಡಿರುವ ಜಾಂಬೂರಿ ಮಹಾ ಮೇಳದಲ್ಲಿ ಆಯೋಜಿಸಿರುವ ಆರಣ್ಯ ಲೋಕ ಸೃಷ್ಟಿಸಲಾಗಿದೆ. ಪ್ರತಿದಿನ 50 ಕಾರ್ಮಿಕರು ಕ್ರಮವಾಗಿ 20 ದಿನಗಳಲ್ಲಿ ಈ ಕಾಡಿನ ಪ್ರತಿರೂಪ ಸೃಷ್ಟಿಸಿದ್ದಾರೆ. ಸಹಾಯ ಆರಣ್ಯದಲ್ಲಿ ಕೃತಕ ಮಳೆಯೂ ಸೃಷ್ಟಿಸಲಾಗಿದೆ. ಇದು ಪ್ರಾಣಿಗಳು, ಕುಡಿಯಗಳು ಕೃತಕವಾಗಿ ರಚಿಸಲಾಗಿದೆ. ಇದಲ್ಲದೆ ಚಕ್ಷಣ ಪಥ, ರಾತ್ರಿವನ, ಜಲಾಶಯ, ಕೆರೆ ಇತ್ಯಾದಿಗಳನ್ನು ರೂಪಿಸಲಾಗಿದೆ. ಅರಣ್ಯವನ್ನು ಮುದ್ದು ರೂಪ್‌ಗಳೇ ಮಾಡಲಾಯಿದ್ದು ಆಳ್ವಾಸ್ ಹಾಗೂ ರಾತ್ರಿವನಾಯಿದ್ದು ಇದರ ಮೇಲೆ ಸಚಿವಾಯಿತ್ತಾ ಕಾಡಿನ ಸೊಬಗು ಸವಿಯಬಹುದಾಗಿದೆ.

ಹಳ್ಳಿ ಮನೆಯಲ್ಲಿ ಪಾರಂಪರಿಕ ವಸ್ತುಗಳ ಸಂಗಮ



ಬೆಳ್ತಂಗಡಿ ತಾಲೂಕಿನ ಕೊಯ್ಯೂರು ಗ್ರಾಮದ ಹಳ್ಳದಲ್ಲಿ ಹೈದಾರಿ ಎಂಬ ಹಾರುಹಾಕಿ ಮಣ್ಣಿಗೆ ಪ್ರಸಿದ್ಧಿಯಾದ ಜಾಂಬೂರಿಯಲ್ಲಿ ವಿಶಿಷ್ಟ ಕಾರಣಕ್ಕೆ ಗಮನ ಸೆಳೆಯುತ್ತಿದ್ದಾರೆ. 50 ವರ್ಷಗಳ ಅವಧಿಯಲ್ಲಿ ಇವರು ದೇಶದ ಮೂಲೆಮೂಲೆಗಳಲ್ಲಿ ಒಂದಿಷ್ಟು ತಂದಿರುವ ಪ್ರಾಚೀನ ಬಳಕೆಯ ವಸ್ತುಗಳನ್ನು ಇಲ್ಲಿ ಒಟ್ಟಾಗಿ ನೋಡಿದಲ್ಲಿಸಿದ್ದಾರೆ. 13ನೇ ವರ್ಷದಲ್ಲಿ ಕಲಿಯಿಂದ ಆರಂಭ ಕಲ್ಲುಗಳನ್ನು ಪತ್ತಿ ತಂದು ಸಂಗ್ರಹಿಸಿದ್ದ ಹೈದಾರಿ ಬಳಕ ಪ್ರಾಚೀನ ವಸ್ತುಗಳ ಸಂಗ್ರಹದ ಗಣನ ಹುಚ್ಚಿಕೊಂಡರು. ತಕ್ಷಣಾಗಳ ಒಂದೆ ಮನೆಗಳಲ್ಲಿ ಬಳಸುತ್ತಿದ್ದ ವಸ್ತುಗಳು, ಒಂದಿಷ್ಟು ವಿಲೇಜ್‌ಗಳ ವಸ್ತುಗಳು ಸೇರಿದಂತೆ ಪ್ರಸ್ತುತ ಬಳಕೆ ಬಿದ್ದಿರುವ ಹಳೆಯ ಸೂರಾರು ವಸ್ತುಗಳು ಇವೆ.

ಸೆಲ್ಫಿ ಕಾರ್ನರ್ ಸಂಭ್ರಮ



150 ವಿಶೇಷ ಪ್ರದೇಶದಲ್ಲಿ ಪರಿಚಿತಿಯಂದಿರುವ ಜಾಂಬೂರಿ ಮಹಾ ಮೇಳದ ಇಂಚಿಂಚು ಜಾಗವೂ ಸೆಂದಂಯಾದ ಸಮಯವನ್ನು ಯಾವ ಕೋನದಿಂದ ನೋಡಿದರೂ ರೋಮಾಂಚನ ಮೂಡಿಸುತ್ತಿದೆ. ಅಂತಲೇ ವಿದ್ಯಾರ್ಥಿಗಳು, ತರುಣ ತರುಣಿಯರು, ಸಾರ್ವಜನಿಕರು ಇಂಚಿನ ಸಂಚರಿ ಸ್ಥಳಗಳು ಸೆಲ್ಫಿ ಕಾರ್ನರ್‌ಗಳಾಗಿ ಹಾರಿಸಿದ್ದಾರೆ. ವಿಶೇಷ ಬಣ್ಣ, ಸಣಕಾಲಿಗಳ ಬಣ್ಣ ನೀಡಿ ವಿದ್ಯಾರ್ಥಿಗಳು ಸೆಲ್ಫಿ ಹೆಸರುವ ದೃಷ್ಟ ಪ್ರಶ್ನೆಗಳು ಹಾಕಿವೆ. ಅದರಲ್ಲೂ ತರಕಾರಿ ಪ್ರೇಮಿ, ಪುಷ್ಪ ಲೋಕ, ಪ್ರಕೃತಿ ಪೈವಿಧ್ಯಗಳು ಸೆಲ್ಫಿ ಸಂಭ್ರಮದ ಸ್ಪಾರ್ಟ್‌ಗಳಾಗಿವೆ.

ಆಹಾರ ಮೇಳ-ಗ್ರಾಹಕ ಮೇಳ



ಅಂತಾರಾಷ್ಟ್ರೀಯ ಜಾಂಬೂರಿಯಲ್ಲಿ ಆಹಾರ ಮೇಳ ಮತ್ತು ಗ್ರಾಹಕ ಮೇಳ ಅರ್ಜಾಕ್ ಸಹಿತಮೇಂಬಿದೆ. ಬೆಟ್ಟದ ತುದಿಯ ವಿಶಾಲ ಮೈದಾನದಲ್ಲಿ 100ಕ್ಕೂ ಅಧಿಕ ಮಳಿಗೆಗಳಲ್ಲಿ ಗ್ರಾಹಕ ಮೇಳ ಪ್ರಾರಂಭವಾಗಿದೆ. ಇಡೀ ರಾಜ್ಯಗಳ ಖಾದ್ಯಗಳು, ಪ್ರಸಾದ, ಪಕ್ಷಿಗಳು, ಮನೆ ಬಳಕೆ ವಸ್ತುಗಳು ಮಳಿಗೆಗಳಲ್ಲಿ ಮಾರಾಟವಾಗುತ್ತಿದೆ. ಗ್ರಾಹಕ ಮೇಳವು ವೈವಿಧ್ಯಮಯ ವಸ್ತುಗಳ ಖರೀದಿಗೆ ವೇದಿಕೆ ಒದಗಿಸಿಕೊಡುತ್ತಿದೆ. ಆಹಾರ ಮೇಳವು ಕರಾವಳಿಯ ಸಾಂಪ್ರದಾಯಿಕ ತಿನಿಸುಗಳಿಂದ ಜಗತ್ತಿನ ಮೈಸೂರು, ಬೆಂಗಳೂರು, ಮಧ್ಯ ಕರ್ನಾಟಕ, ಉತ್ತರ ಕರ್ನಾಟಕ ಮತ್ತು ಉತ್ತರ ಭಾರತ ಶೈಲಿಯ ತಿಂಡಿತಿನಿಸು ಮಾರಾಟವಾಗುತ್ತಿದೆ. ಬೀಳು ಭೂಮಿಯಲ್ಲಿ ಕಲ್ಲುಗಾಡು ಜಾಗ್ಲೆ ಎಲ್ಲಿಲ್ಲದ ಬೇಡಿಕೆ ಸ್ಯಾಸ್ಯವಾಗಿದೆ.

ಕೆಲ್ಫಿ ಕಾರ್ನರ್ ಸಂಭ್ರಮ

158 ಸಾಹಸಿಕ ಕ್ರೀಡೆಗಳ ಅಂಕಣ



12 ಎಕರೆಯಲ್ಲಿ ತರಕಾರಿ, ಕೃಷಿ ಮೇಳ



ವಿದ್ಯಾರ್ಥಿಯ 12 ಎಕರೆ ಮೈದಾನದಲ್ಲಿ ತರಕಾರಿ ಮತ್ತು ಕೃಷಿ ಮೇಳ ವರ್ಚಸ್ಸಿನಲಾಗಿದೆ. ಒಂದು ಭಾಗದಲ್ಲಿ ಸಾಲು ಬದಿಗಳ ಕೃಷಿ ಮಳಿಗೆಗಳು ಗಮನ ಸೆಳೆಯುತ್ತಿದೆ. ಇಲ್ಲಿರುವ ಮಾಗಿದಲ್ಲಿ ವಿವಾಹ ತರಕಾರಿ ಪ್ರದರ್ಶನ ಕಲೆ ಎತ್ತಿದೆ. 4 ತಿಂಗಳ ಒಂದೆ ಪಣ ಪಡ್ಡಿ, ನೀರುಳ್ಳಿ, ಸೌತೆಕಾಯಿ ಹಾಗೆ ತರಕಾರಿ ಗಡಿಗಳನ್ನು ಬೆಳೆದಿದ್ದು ಈಗ ಬಳ್ಳಾರಿಯ ಪಡ್ಡಿಕೆ ಹಬ್ಬಗಳಿಗಾಗಿ. ಬಿಳಿಕಾಯಿ, ಸೂರಣಕಾಯಿ, ಕುಂಬಳಕಾಯಿ ಸೇರಿದಂತೆ 50ಕ್ಕಿಂತಲೂ ಅಧಿಕ ಬಗೆಯ ತರಕಾರಿಗಳು ಪಡ್ಡಿಕೆಯಲ್ಲಿವೆ. ಪುಷ್ಪ ತೋಟ, ತರಕಾರಿ ತೋಟ, ಕೃಷಿ ತೋಟಕ್ಕೆ ನಿರಂತರ ನೀರು ಹಾಯಿಸುವ ಬಾವಿ ಪಕ್ಕದಲ್ಲಿ ಸಂಪೂರ್ಣವಾಗಿದೆ.

ಗಮನ ಸೆಳೆಯುವ ಕೈಮಗ್ಗ ಪ್ರಾತ್ಯಕ್ಷಿಕೆ



ಕೈಮಗ್ಗದ ಪಡ್ಡಗಳ ಬಳಕೆ ಕ್ಷೀಣಿಸುತ್ತಿರುವ ಕುಲಕ್ಕುಬ್ಬರಲ್ಲಿ ಜಾಂಬೂರಿ ಮಹಾ ಮೇಳದಲ್ಲಿ ಕೈಮಗ್ಗ ತರುಣಿಗಳ ಪ್ರಾತ್ಯಕ್ಷಿಕೆ ಗಮನ ಸೆಳೆಯುತ್ತಿದೆ. ಕಲ್ಲಿಗೂಳಿಯ ನೇಕಾರರ ಸಂಘದ ನೇತೃತ್ವದಲ್ಲಿ ಮಗ್ಗದ ಯಂತ್ರದ ಮೂಲಕ ಬಟ್ಟೆ ತಯಾರಿಸುವ ಪ್ರಾತ್ಯಕ್ಷಿಕೆಯನ್ನು ನಿರಂತರ ಮಾಡಲಾಗುತ್ತಿದೆ. ತಾಲೂಕಿನಲ್ಲಿ ಇತಿಹಾಸವಿರುವ ಅಕ್ಕುಸ ಪ್ರದೇಶ ಮುಗ್ಗದ ಮಂತ್ರ ಕೆಲಸ ಮಾಡುವ ರೀತಿಯನ್ನು ದೇಶದ ಮೂಲೆಮೂಲೆಗಳಿಂದ ಬಂದಿರುವ ಸ್ಕೌಟ್ಸ್ ಗೈಡ್ಸ್‌ಗಳು ಆಶ್ಚರ್ಯದಿಂದ ನೋಡುತ್ತಿದ್ದರು.

ಮೆಗಾ ಅನ್ನದಾಸೋಹಕ್ಕೆ ಚಾಲನೆ



ಜಾಂಬೂರಿ ಕ್ಯಾಂಪ್‌ಸೈಟ್‌ನಲ್ಲಿ 26ಕ್ಕಿಂತಲೂ ಅಧಿಕ ಕಡೆ ಪಾಕಶಾಲೆ, ಭೋಜನ ಶಾಲೆ ನಿರ್ಮಿಸಲಾಗಿದೆ. ಪ್ರತಿ ಪಾಕಶಾಲೆಯಲ್ಲಿ 50ರಷ್ಟು ಬಾಣಸಿಗರು ಆಹಾರ ತಿನಿಸುಗಳನ್ನು ತಯಾರಿಸುತ್ತಿದ್ದಾರೆ. ಪಲ್ಯ, ಚಟ್ನಿ, ಗಸಿ, ಅನ್ನ, ಸಾರು, ಸಾಂಬಾರ್, ಪಾಯಸ, ಮೊಸರು, ಹಾಲು ಮೊದಲು ದಿನದ ಮಧ್ಯಾಹ್ನದ ಮೆನುವಿನಲ್ಲಿ ಸ್ಥಾನ ಪಡೆದಿವೆ. ಕೆಲವು ಭೋಜನ ತಯಾರಿಸಲಾಗುತ್ತಿದ್ದು, ವಿಶೇಷವಾಗಿ ಬೆಳಿಗ್ಗೆ ಸಿಹಿ ಭಕ್ಷ್ಯಕ್ಕೆ ಅದ್ಯತೆ ನೀಡಲಾಗಿದೆ. ಎಲ್ಲಾ ಕೌಂಟರ್‌ಗಳಲ್ಲಿ ಸ್ಕೌಟ್ಸ್ ಗೈಡ್ಸ್‌ಗಳು ಮತ್ತಿತರ ವಿದ್ಯಾರ್ಥಿಗಳು ಸ್ವಯಂಸೇವಕರಾಗಿದ್ದಾರೆ. ಸದರಿ ಕಾಲು. ಉಚ್ಚಾಟನೆಗಳ, ಪಿಸ್ಸಿಗೆ ಅವಕಾಶ ನೀಡಲಾಗಿದೆ. ಪ್ರತಿದಿನ 1 ಲಕ್ಷ ಮಂದಿಗೆ ಆಕ್ಷಣಾತೀತ ನೀಡುವ ಗುರಿ ಸಂಘಟಕರದ್ದಿದೆ.

ಲಕ್ಷ ಮೀರಿದ ಪುಸ್ತಕ ಭಂಡಾರ



ನಾನಿಸ ಹೆಸರಾಂತ ಪ್ರಕಾಶಕ ಸಂಸ್ಥೆಗಳು ಜಾಂಬೂರಿ ಪುಸ್ತಕ ಮೇಳದಲ್ಲಿ ಭಾಗವಹಿಸಿದೆ. ಕನ್ನಡ, ಹಿಂದಿ, ಇಂಗ್ಲಿಷ್ ಸೇರಿದಂತೆ ದೇಶದ ಬಹುಚರ್ಚಿತ ಪ್ರಾದೇಶಿಕ ಭಾಷೆಗಳ ಪುಸ್ತಕಗಳು ಇವೆ. ಕಣ್ಣು ಆಧಿಕ ಮಳಿಗೆಗಳಲ್ಲಿ ಲಕ್ಷ ಮೀರಿದ ಪುಸ್ತಕಗಳ ಸಂಗ್ರಹವಿದೆ. ಜೊತೆಗೆ ದಿನ ಪುಸ್ತಕ ಪ್ರದರ್ಶನಗಳಲ್ಲಿ ಓದುಗರ ಗಮನ ಸೆಳೆಯುವುದೂ ಮುಂದಿನ 6 ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ಓದುಗರ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ.